ಜನಪದ ಆಟಗಳು

ಡಾ. ಚಕ್ಕೆರೆ ಶಿವಶಂಕರ್



ಜನಪ್ರಿಯ ಜಾನಪದ ಪುಸ್ತಕಮಾಲೆ-೪೩

ಜನಪದ ಆಟಗಳು

ಡಾ. ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

JANAPADA AATAGALU - Folk Games-By **Chakkere Shivashankar.** Pulished by **Karnataka Janapada Parishath.** No. 1, Jaladarshini L ayout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೦೯ ಪುಟಗಳು : ೪೮

ಪ್ರತಿಗಳು : ೨೦೦೦

ಬೆಲೆ : **ರೂ. ೧೫** (ಹದಿನೈದು ರೂಪಾಯಿ)

ಮುದ್ರಕರು :

ಚಂದನ ಪ್ರಿಂಟರ್ಸ್

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ **ಡಾ. ಚಕ್ಕೆರೆ ಶಿವಶಂಕರ್** ಅವರು **ಜನಪದ ಆಟಗಳು** ಕುರಿತು ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೦೧-೧೨-೨೦೦೯
ಬೆಂಗಳೂರು

ಜನಪದ ಆಟಗಳು

ಜಾನಪದ ಎನ್ನುವಂಥದ್ದು ಅನಕ್ಷರಸ್ಥ ಜನಸಮುದಾಯದ ಜ್ಞಾನ-ವಿಜ್ಞಾನ ಪರಂಪರೆ. ಲೋಕಾನುಭವ, ಲೋಕ ಜ್ಞಾನ, ಗ್ರಾಮೀಣ ತಿಳಿವಳಿಕೆ ಇತ್ಯಾದಿ ಅಭಿಪ್ರಾಯಗಳು ಸಾಮಾನ್ಯವಾಗಿ ರೂಢಿಯಲ್ಲಿವೆ. ಜಾನಪದ ಜ್ಞಾನವನ್ನು ತಲೆಮಾರುಗಳಿಂದಲೂ ಜನಸಮುದಾಯವು ನೆನಪು ಮತ್ತು ಅನುಕರಣೆಯ ಮೂಲಕ ಮುಂದುವರಿಸಿಕೊಂಡು ಬಂದಿದೆ. ತಲೆಮಾರಿನಿಂದ ತಲೆಮಾರಿಗೆ ಹರಿದು ಬರುವಾಗ ನಡೆದಿರಬಹುದಾದ ಸಂಕಲನ-ವ್ಯವಕಲನ ಕ್ರಿಯೆಗಳು ಈ ಜ್ಞಾನವನ್ನು ಹೆಚ್ಚು ಹೆಚ್ಚು ವಿಸ್ತರಿಸಿವೆ, ಸೃಜನಶೀಲಗೊಳಿಸಿವೆ, ವೈವಿಧ್ಯಮಯವನ್ನಾಗಿಸಿವೆ, ಕಲಾತ್ಮಕವಾಗಿಸಿವೆ. ಕೆಲವೊಂದು ಸಂದರ್ಭ-ಕಾಲಘಟ್ಟಗಳಲ್ಲಿ ಕುಗ್ಗಿಸಿರುವುದೂ ಉಂಟು. ಕಿವಿಯಿಂದ ಕಿವಿಗೆ, ಬಾಯಿಯಿಂದ ಬಾಯಿಗೆ, ನಡೆದು ಬಂದಿರುವ ಈ ಪ್ರಕ್ರಿಯೆಗೆ ವಾಕ್ ಸಂಪ್ರದಾಯ, ವಾಚಿಕ ಸಂಪ್ರದಾಯ, ಮೌಖಿಕ ಪರಂಪರೆ ಮುಂತಾದ ಹೆಸರುಗಳಿಂದ ವಿದ್ವಾಂಸರು ಗುರುತಿಸಿರುತ್ತಾರೆ.

ಸಮಗ್ರ ಕರ್ನಾಟಕ ಜಾನಪದ ಜ್ಞಾನ ಪರಂಪರೆಯನ್ನು ಪ್ರಧಾನವಾಗಿ ನಾಲ್ಕು ಧಾರೆಗಳಾಗಿ ವಿಂಗಡಿಸಿಕೊಳ್ಳಬಹುದು :

1) ಜನಪದ ಸಾಹಿತ್ಯ ರೂಪಗಳು
2) ಜನಪದ ಭಾಷಿಕ ರೂಪಗಳು
3) ಜನಪದ ಕ್ರಿಯಾ ರೂಪಗಳು
4) ಜನಪದ ವೈಜ್ಞಾನಿಕ ರೂಪಗಳು

ಜನಪದ ಆಟಗಳು ಜಾನಪದ ಜ್ಞಾನ ಪರಂಪರೆಯಲ್ಲಿ ಕ್ರಿಯಾ ರೂಪಗಳ ಪರಿಧಿಗೆ ಸೇರುತ್ತದೆ. ಜಾನಪದದ ಉಳಿದೆಲ್ಲಾ ಪ್ರಕಾರಗಳಂತೆಯೇ ಆಟಗಳೂ ಸಹ ಅನನ್ಯವಾದುವು, ಸಾರ್ವತ್ರಿಕವಾದುವು ಮತ್ತು ಸಾರ್ವಕಾಲಿಕವಾದುವು. ಮಕ್ಕಳು, ಹೆಂಗಸರು ಮತ್ತು ಗಂಡಸರು ಈ ಕ್ರಿಯಾರೂಪದ ಉಳಿವು–ಬೆಳವಣಿಗೆಗೆ ಕಾರಕರು ಮತ್ತು ಪ್ರೇರಕರು. ಮನುಷ್ಯನ ಹುಟ್ಟಿನಿಂದ ಸಾವಿನವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡು ಬಂದಿರುವ ಆಟಗಳು ಕೇವಲ ಮನರಂಜನೆಗಾಗಲಿ, ದೈಹಿಕ ವ್ಯಾಯಾಮಕ್ಕಾಗಲಿ ಹುಟ್ಟಿಕೊಂಡವುಗಳಲ್ಲ. ಸಮುದಾಯದ ಬದುಕನ್ನು ಸದಾ ಜೀವಂತವಾಗಿರಿಸುವ, ಕ್ರಿಯಾಶೀಲವಾಗಿರಿಸುವ ಜವಾಬ್ದಾರಿ ಆಟಗಳಿಗೆ ಸೇರಿದ್ದು. ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಪ್ರಾಥಮಿಕ ಆವಿಷ್ಕಾರಗಳಿಗೆ ಜನಪದ ಆಟಗಳೇ ಮೂಲ ಎನ್ನುತ್ತಾರೆ ಪ್ರಸಿದ್ಧ ಜಾನಪದ ವಿದ್ವಾಂಸರಾದ ದೇಜಗೌ.

ಜನಪದ ಆಟಗಳು ಮನರಂಜನೆಗೆ ಮೀಸಲಾದವುಗಳೆಂದು ಮೇಲು ನೋಟಕ್ಕೆ ಗೋಚರಿಸಿದರೂ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಚಾರಗಳನ್ನು ತಮ್ಮ ಒಡಲೊಳಗೆ ಅಂತರ್ಗತಿಸಿಕೊಂಡಿವೆ. ಜನಪದ ಆಟಗಳು ನಾಡಿನ ಚರಿತ್ರೆಯನ್ನು ತಿಳಿಸಿಕೊಡುತ್ತವೆ. ಕರ್ನಾಟಕದ ಮೇಲಾದ ಮುಸಲ್ಮಾನರು, ಮರಾಠಿಗರು, ವಿದೇಶೀಯರ ಆಕ್ರಮಣದ ಪ್ರಭಾವ ಮತ್ತು ಪರಿಣಾಮಗಳನ್ನು ಪರಿಚಯಿಸುತ್ತವೆ. ನಿಜವಾದ ಅರ್ಥದಲ್ಲಿ ಸಮಾಜ, ಸಂಸ್ಕೃತಿ, ಸಮುದಾಯಗಳ ಬದುಕಿನ ಸಂಗತಿಗಳನ್ನು, ವೈರುಧ್ಯಗಳನ್ನು ಆಟಗಳು ಪ್ರತಿಬಿಂಬಿಸುತ್ತವೆ. ಶೋಷಣೆ, ದಬ್ಬಾಳಿಕೆ, ಪ್ರತಿಭಟನೆಗಳನ್ನು ಆಟಗಳು ಅಭಿವ್ಯಕ್ತಿಸುತ್ತವೆ.

ಆಟಗಳಲ್ಲಿನ ಪ್ರಾದೇಶಿಕತೆ ವೈವಿಧ್ಯಮಯವಾದುದು. ವಿಶೇಷವಾಗಿ ನಿರ್ದಿಷ್ಟ ಋತುಮಾನಗಳು, ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು,

ಆಚರಣೆಗಳು, ವಿಧಿ ನಿಷೇಧಗಳ ಅನುಸರಣೆಯ ಸಂದರ್ಭದಲ್ಲಿ ಕಂಡು ಬರುವುದರಿಂದ ಆಟಗಳಿಗೆ ಸಾಂಸ್ಕೃತಿಕ ಮಹತ್ವ ಪ್ರಾಪ್ತಿಸಿರುತ್ತದೆ. ಆಟಗಳಿಂದ ಸಮಯ ಕಳೆಯುತ್ತದೆ, ಮನಸ್ಸಿಗೆ ಉಲ್ಲಾಸ, ದೇಹಕ್ಕೆ ವ್ಯಾಯಾಮ ದೊರೆಯುತ್ತದೆ, ಬುದ್ಧಿ ಪ್ರಕಾಶಿಸುತ್ತದೆ; ಪ್ರತಿಭೆ ಹೊಳೆಯುತ್ತದೆ. ಬದುಕಿನ ಅನೇಕಾನೇಕ ಅನುಭವಗಳನ್ನು ಕಲಿಸುತ್ತದೆ. ಶಾರೀರಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಕಾರಿಯಾದ ಆಟಗಳು ಯಾವುದೇ ಜಾತಿ ಜನಾಂಗಗಳ ಭೇದವಿಲ್ಲದೆ, ಹೆಣ್ಣು-ಗಂಡೆಂಬ ತಾರತಮ್ಯವಿಲ್ಲದೆ, ಭಾಷೆಯ ಸಂಕುಚಿತತೆಗೆ ಒಳಗಾಗದೆ ಸಾರ್ವತ್ರಿಕವಾಗಿ ಸಮಾನಭಾವದಿಂದ ಬೆಳೆದು ಬಂದಿವೆ.

ಜನಪದ ಆಟಗಳು ಸಾಂಪ್ರದಾಯಕವಾದವುಗಳಾಗಿದ್ದು, ಕಾಲಕ್ಕನುಗುಣವಾಗಿ ಪ್ರಾದೇಶಿಕವಾಗಿ ಬದಲಾವಣೆಗಳಿಗೆ ಒಳಗಾಗಿವೆ ಎಂಬುದು ನಿಜವಾದರೂ ಅವುಗಳು ಬದುಕಿನಲ್ಲಿ ಆತ್ಮೀಯತೆಯನ್ನು, ಸ್ಪರ್ಧಾತ್ಮಕ ಮನೋಭಾವವನ್ನು, ಆ ಮೂಲಕ ಯಶಸ್ಸಿನ ಸಾಧನೆಗಳನ್ನು ಉಕ್ಕಿಸುತ್ತವೆ.

ಬದುಕಿನ ಸಮಸ್ತ ಸಂಗತಿಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಆಟಗಳು ಮನುಷ್ಯ ಸಮಾಜದ ಅಧ್ಯಯನದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ, ಸಮುದಾಯದ ಬದುಕಿನ ವಿವರಗಳನ್ನರಿಯಲು ನೆರವಾಗುತ್ತವೆ. ಸಂಸ್ಕೃತಿ, ಚರಿತ್ರೆ, ಪುರಾಣ, ಲೈಂಗಿಕತೆ, ಧಾರ್ಮಿಕ, ವಿಧಿ ವಿಧಾನಗಳಂತಹ ಅಧ್ಯಯನ ಯೋಗ್ಯ ವಿಚಾರಗಳನ್ನು ನಿರೂಪಿಸುತ್ತವೆ. ಈ ದೃಷ್ಟಿಯಿಂದ ಆಟ ಎನ್ನುವಂಥದ್ದು ಕೇವಲ ಮನರಂಜನೆಯಾಗಿ ಉಳಿಯದೆ, ನಿಜದ ಅರ್ಥದಲ್ಲಿ ಬದುಕಿನ ತರಬೇತಿಯ ರಂಗವಾಗಿದೆ. ಈ ರಂಗದಲ್ಲಿ ವ್ಯಕ್ತಿಯು ಮಗುವಾಗಿ, ಯುವಕನಾಗಿ, ವಯಸ್ಕನಾಗಿ ಬದುಕನ್ನು ಕಲಿಯುತ್ತಾ ಬೆಳೆಯುತ್ತಾನೆ. ಇದರಲ್ಲಿ ಸೋಲು-ಗೆಲುವು

ಎನ್ನುವಂಥದ್ದು ಪರಮ ಗಂತವ್ಯವಾಗಿರದೆ ಅದೊಂದು ಬದುಕಿನ ಪ್ರಕ್ರಿಯೆಯಾಗಿರುತ್ತದೆ, ಅಷ್ಟೆ.

1.1 **ಆಟಗಳ ಹುಟ್ಟು ಮತ್ತು ಬೆಳವಣಿಗೆ** : ಆಟಗಳು ಆದಿಮಾನವನ ಅಭಿವ್ಯಕ್ತಿ. ಬುದ್ಧಿ ಮತ್ತು ಸಂಸ್ಕೃತಿ ವಿಕಸನಗೊಂಡಂತೆಲ್ಲಾ ಆಟಗಳು ವಿಕಸಿಸಿವೆ.

ಜನಪದರ ಬದುಕಿನ ಮೂಲಸ್ರೋತಗಳನ್ನು ಅವಲಂಬಿಸಿರುವ ಹಲವಾರು ಅಂಶಗಳಲ್ಲಿ ಆಟವೂ ಒಂದು. ಆದಿಮ ಹಂತದಿಂದಲೂ ಆಟಗಳಿವೆ. ಎಂತಹುದೇ ಸಂದರ್ಭದಲ್ಲೂ ಯಾವುದೇ ನಾಗರಿಕತೆಯ ಹಂತದಲ್ಲಿಯೂ ನಾಶವಾಗಲು ಇಚ್ಛಿಸದ ಆಟಗಳು ಅವಿನಾಶಿಯಾದವುಗಳು. ಆದಿಮಕಾಲದಲ್ಲಿ ಬೇಟೆ ಮತ್ತು ಪ್ರಾಣಿಗಳ ಚಟುವಟಿಕೆಗಳು ಆಟಗಳ ಉಗಮಕ್ಕೆ ಕಾರಣವಿದ್ದಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಮರಕೋತಿಯಾಟ, ಬೇಟೆಆಟ, ಆನೆಆಟ, ಕಪ್ಪೆಆಟ, ಕುರಿಮರಿ ಆಟಗಳನ್ನು ಪರಿಭಾವಿಸಿದಾಗ ವಿದ್ವಾಂಸರು ತರ್ಕಿಸಿರುವ ಊಹೆಗಳಿಗೆ ಸಾಕ್ಷ್ಯಗಳು ದೊರೆಯುತ್ತವೆ. ಈ ಆಟಗಳು ಆದಿಮ ಆಶಯಗಳನ್ನು ಅಭಿವ್ಯಕ್ತಿಸುವುದರೊಂದಿಗೆ ನಿಸರ್ಗದೊಂದಿಗಿನ ಒಡನಾಟಗಳನ್ನು ಪರಿಚಯಿಸುತ್ತವೆ.

ಜನಪದ ಆಟಗಳು ಅತ್ಯಂತ ಪ್ರಾಚೀನವಾದವುಗಳೆಂಬುದಕ್ಕೆ ಗ್ರೀಕ್, ಬ್ಯಾಬಿಲೋನಿಯಾ, ಅಸ್ಸೀರಿಯಾ, ಹರಪ್ಪಾ ಮೊಹೆಂಜೊದಾರೊ, ಈಜಿಪ್ಟ್, ಮೆಸಪೆಟೋಮಿಯಾ ಮೊದಲಾದ ಪುರಾತನ ಸಂಸ್ಕೃತಿಗಳಲ್ಲಿ ಆಧಾರಗಳು ದೊರೆತಿವೆ. ಗ್ರೀಕ್ ಸಂಸ್ಕೃತಿಯು ಅವನತಿಯ ಹಾದಿಹಿಡಿದಿದ್ದು, ಅದರ ಪುನರುತ್ಥಾನಕ್ಕೆ ಪರಿಹಾರವೇನೆಂದು ಡೆಲ್ಫಿಯ ಕಣಿದೇವತೆಯನ್ನು ಪ್ರಶ್ನಿಸಿದಾಗ, ಆಟಗಳಿಂದ ಮಾತ್ರವೇ ಪುನರುಜ್ಜೀವನ ಸಾಧ್ಯ ಎಂದು ದೇವಿ ಹೇಳಿದಳು. ದೇವವಾಣಿಯ ಉತ್ತರಕ್ಕೆ ಪರ್ಯಾಯವಾಗಿ ಗ್ರೀಕ್‌ನ

ಜನತೆ ಆಟಗಳನ್ನು ರೂಢಿಗೆ ತಂದರೆಂಬ ವಾದವಿದೆ. ಫಲವಾಗಿ ಗ್ರೀಕ್ ಸಂಸ್ಕೃತಿಯಲ್ಲಿ ಚಿಕ್ಕಮಕ್ಕಳಿಂದ ಮೊದಲುಗೊಂಡು ವಯಸ್ಕರವರೆಗೂ ಓಟದ ಪಂದ್ಯ, ಕುದುರೆಪಂದ್ಯ, ಚಕ್ರಎಸೆತ, ರಥಸ್ಪರ್ಧೆ, ಮುಷ್ಟಿಯುದ್ಧಗಳು ಪ್ರಚಲಿತವಾಗಿದ್ದವು. ಅಸ್ಸೀರಿಯಾ, ಬ್ಯಾಬಿಲೋನಿಯನ್ ಸಂಸ್ಕೃತಿಯಲ್ಲಿ ಕುಸ್ತಿ, ಬಿಲ್ಲುಗಾರಿಕೆ ಜನಪ್ರಿಯ ಆಟಗಳಾಗಿದ್ದವು. ಪಗಡೆಯಾಟವು ಈಜಿಪ್ಟಿನಲ್ಲಿ ಒಂದು ಕಾಲಕ್ಕೆ ಜನಪ್ರಿಯವಾಗಿತ್ತೆನ್ನುವುದಕ್ಕೆ ಈಜಿಪ್ಟಿನ ಗೋರಿಗಳಲ್ಲಿ ಸಿಕ್ಕ ಪಗಡೆ ಕಾಯಿಗಳು ಸಾಕ್ಷ್ಯ ನುಡಿಯುತ್ತವೆ. ರೋಮಿನ ಚಕ್ರವರ್ತಿ ಅಗಸ್ಟಸ್‌ಗೆ ತುಂಬಾ ಇಷ್ಟವಾದ ಆಟ ಗೋಲಿ ಆಡುವುದು. ಹೀಗೆ ಚಂಡು, ಬುಗುರಿ, ಗೋಲಿ, ಗೊಂಬೆ, ಪಗಡೆ ದಾಳಗಳು ಹಲವಾರು ಪ್ರಾಚೀನ ಸಂಸ್ಕೃತಿಗಳಲ್ಲಿ ದೊರೆತಿರುವ ನಿದರ್ಶನಗಳಿವೆ.

ಪ್ರಾಚೀನ ಭಾರತ ಮತ್ತು ಕರ್ನಾಟಕದಲ್ಲಿ ಮಕ್ಕಳ ಬೌದ್ಧಿಕ ಶಿಕ್ಷಣದ ಜೊತೆಗೆ ಆಟಗಳ ಮೂಲಕ ದೈಹಿಕ ಬೆಳವಣಿಗೆಗೂ ಅವಕಾಶ ಕಲ್ಪಿಸಲಾಗಿದ್ದಿತು ಎಂಬುದು ಪ್ರಾಚೀನ ಕನ್ನಡ ಕಾವ್ಯಗಳಿಂದ ತಿಳಿದುಬರುತ್ತದೆ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಜನಪದ ಆಟಗಳ ಬಗ್ಗೆ ಸಮೃದ್ಧವಾದ ವಿವರಗಳಿವೆ. ಆದಿಕವಿ ಪಂಪ, ರನ್ನ, ಕವಿ ಚಂದ್ರರಾಜ, ಆಂಡಯ್ಯ, ನಂಜುಂಡ ಕವಿ, ಶಿವಕೋಟ್ಯಾಚಾರ್ಯ, ವಿರೂಪಾಕ್ಷ ಪಂಡಿತ, ಕುಮಾರ ವ್ಯಾಸ ಮೊದಲಾದ ಕವಿಗಳು ಮತ್ತು ಕನಕ-ಪುರಂದರರಂತಹ ದಾಸವರೇಣ್ಯರು ಜನಪದ ಆಟಗಳ ಸ್ವರೂಪವನ್ನು ತಮ್ಮ ಕೃತಿಗಳಲ್ಲಿ ಹಾಗೂ ಕೀರ್ತನೆಗಳಲ್ಲಿ ಸವಿವರವಾಗಿ ಬಣ್ಣಿಸಿದ್ದಾರೆ. ಪಂಪಭಾರತದಲ್ಲಿ ಕುರು-ಪಾಂಡವರು ಮಕ್ಕಳಿದ್ದಾಗ ಆಡುತ್ತಿದ್ದ ಆಟಗಳಲ್ಲಿ ಗೋಲಿಯಾಟ (ಗುಳ್ಳೆಗೊಟ್ಟು), ಚಂಡಿನಾಟ(ಬಟ್ಟುಳಿಸೆಂಡು), ಲಗ್ಗೆ ಚಂಡು (ಪೊಡೆಸೆಂಡು), ಮರಕೋತಿಯಾಟ (ಮರಗೆರಸಿ)ಗಳ ವರ್ಣನೆ ಇದ್ದರೆ, ಕುಮಾರವ್ಯಾಸನು

ಉಪ್ಪಿನಮೂಟೆ ಆಟ, ಗುರಿಯಾಳು ಆಟ, ಕತ್ತಲೆಗುದ್ದು ಆಟ, ಚಂಡಾಟ, ಕಂಬದಾಟ, ನಿಡುಗವಣೆಯಾಟ ಮುಂತಾದವುಗಳನ್ನು ಪ್ರಸ್ತಾಪಿಸಿರುತ್ತಾನೆ. ಕುಮಾರವ್ಯಾಸನು ವಿವರಿಸುವ ಆಟಗಳೆಲ್ಲವೂ ಈಗಲೂ ಗ್ರಾಮೀಣ ಕರ್ನಾಟಕದಲ್ಲಿ ಕಂಡುಬರುವ ಆಟಗಳಾಗಿವೆ.

ವೇದೋಪನಿಷತ್ತುಗಳಲ್ಲಿ ವಿವಿಧ ಬಗೆಯ ಸ್ಪರ್ಧೆಗಳು, ಆಟಗಳು ಆಟಗಳಿಗೆ ಬಳಸುವ ಸಲಕರಣೆಗಳು ಪ್ರಸ್ತಾಪಿಸಲ್ಪಟ್ಟಿವೆ. ಬೇಟೆ, ಕುದುರೆ ಸವಾರಿ, ಬಿಲ್ವಿದ್ಯೆ, ಅಂಗಸಾಧನೆ, ಓಟ, ಈಜುಗಾರಿಕೆ, ಜೂಜು ಮುಂತಾದ ಆಟಗಳು ಸರ್ವೇಸಾಮಾನ್ಯವಾಗಿದ್ದವು. ರಾಮಯಣ – ಮಹಾಭಾರತಗಳ ಕಾಲದಲ್ಲಿ ಮೃಗಯಾವಿಹಾರ, ದ್ವಂದ್ವಯುದ್ಧ, ಕುಸ್ತಿ, ಪಗಡೆಯಾಟ, ಚದುರಂಗ, ಜೂಜು ಅರಸು ಮನೆತನದವರಿಗೆ ಕಡ್ಡಾಯವಾಗಿದ್ದವು. ಸಂಸ್ಕೃತದ ವ್ಯಾಸ ಭಾರತ ಮತ್ತು ಶ್ರೀಮದ್ಭಾಗವತ ಪುರಾಣದಲ್ಲಿ ಕೃಷ್ಣನ ಬಾಲಲೀಲೆಗಳ ವರ್ಣನೆಯಂತೂ ಸುರಮ್ಯ. ಬೃಂದಾವನದಲ್ಲಿ ಕೃಷ್ಣ ಬಲರಾಮರು ಆಡಿದ ಮಕ್ಕಳಾಟಗಳು ವರ್ಣಿಸಲಸದಳ. ಜೋಕಾಲಿಯಾಟ. ಕಪ್ಪೆಯಾಟ, ರಥಸ್ಪರ್ಧೆ, ಇತ್ಯಾದಿ.

ಆದಿಮ ಸಾಹಿತ್ಯದಲ್ಲಿ ಹಾಗೂ ಭಾರತೀಯ ಸಾಂಸ್ಕೃತಿಕ ಚರಿತ್ರೆಯ ಉದ್ದಕ್ಕೂ ಕಾಣಸಿಗುವ ಜನಪದ ಆಟಗಳ ಉಲ್ಲೇಖಗಳು ಮತ್ತು ಅವುಗಳ ವಿವರಣೆಗಳು, ಜನಪದ ಆಟಗಳ ಪ್ರಾಚೀನತೆಯನ್ನು ಪರಿಚಯಿಸುತ್ತವೆ.

1.2 **ಆಟಗಳ ಲಕ್ಷಣಗಳು** : ಶಿಕ್ಷಣವೇ ಇಲ್ಲದಿದ್ದ ಕಾಲದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಅವಿಭಕ್ತ ಕುಟುಂಬಗಳಲ್ಲಿ ಮಕ್ಕಳನ್ನು ಸುಧಾರಿಸುವುದು ಪ್ರಯಾಸದ ಕೆಲಸವಾಗಿತ್ತು. ದುಡಿಯುವ ವಯಸ್ಸಿನ ಹೆಂಗಸರು–ಗಂಡಸರು ಚಿಕ್ಕ ಮಕ್ಕಳನ್ನು, ಮನೆಯಲ್ಲಿ ವಯಸ್ಸಾದ ಅಜ್ಜ–ಅಜ್ಜಿಯರ ಸುಪರ್ದಿಗೆ ಒಪ್ಪಿಸಿ ಹೊಲಗೆಲಸ, ಮನೆಗೆಲಸ, ಕೂಲಿ ಕಸುಬುಗಳ ಸಲುವಾಗಿ ಹೊರಹೋಗುತ್ತಿದ್ದರು. ಮನೆಯಲ್ಲಿದ್ದ ತಿಳಿವಳಿಕಸ್ಥ,

ವಿವೇಕಿಗಳಾದ ಹಿರಿಯರು ಕಿರಿಯ ಮಕ್ಕಳನ್ನು ಸಂತೈಸುವ ಸಲುವಾಗಿ ಆಟಗಳನ್ನು ಹೇಳಿಕೊಟ್ಟರು; ಕಲಿಸಿದರು. ಅಳುವ ಮಕ್ಕಳನ್ನು ಸುಮ್ಮನಿರಿಸಲು ಅಜ್ಜಿ, ಕಥೆ ಹೇಳುತ್ತಿದ್ದ ರೀತಿಯಲ್ಲೇ ತಂಟೆಮಾಡುತ್ತಿದ್ದ ಮಕ್ಕಳನ್ನು ಕ್ರಿಯಾಶೀಲಗೊಳಿಸಲು ಆಟಗಳನ್ನು ಕಲಿಸಿದಳು. ಆದ್ದರಿಂದಲೇ ಅಜ್ಜಿಯಾಟ ಎಂದು ಹೆಸರು ಬಂದಿತು. ಹುಡುಗಿಯರು ಮತ್ತು ಚಿಕ್ಕ ಮಕ್ಕಳು ಆಡುವ ಆಟಗಳು ದೊಡ್ಡವರಿಂದ ರೂಪಿತವಾಗಿ ಮಕ್ಕಳಿಗೆ ಕಲಿಸಿದಂಥವುಗಳು. ಇನ್ನು ಹುಡುಗರ ಆಟಗಳನ್ನು ಹುಡುಗರೇ ಸಾಮುದಾಯಿಕವಾಗಿ ರೂಪಿಸಿ, ರೂಪಾಂತರಿಸಿ, ಬೆಳೆಸಿಕೊಂಡು ಬಂದವುಗಳು. ಎಮ್ಮೆ ದನ ಕುರಿ ಮೇಯಿಸಲು ದೂರದ ಗುಡ್ಡ–ಹುಲ್ಲುಗಾವಲುಗಳಿಗೆ ಹೋಗುತ್ತಿದ್ದ ಹುಡುಗರು ಅಲ್ಲಿ ಕಾಲಕಳೆಯಲು ರೂಪಿಸಿಕೊಂಡ ಗೋಲಿಯಾಟ, ಮರಕೋತಿಯಾಟ, ಚಿಣ್ಣಿಕೋಲು ಮುಂತಾದವು ಹುಡುಗರ ಹೊರಾಂಗಣ ಆಟಗಳಾಗಿ ಬೆಳೆದವು.

ಜನಪದ ಆಟಗಳ ಲಕ್ಷಣಗಳನ್ನು ಕುರಿತು ನಿರ್ದಿಷ್ಟವಾಗಿ ನಿರ್ಣಯಿಸಲು ಬರುವುದಿಲ್ಲ. ಏಕೆಂದರೆ ಜನಪದ ಆಟಗಳು ನಿಯಮಬದ್ಧವಾದ ನಾಗರಿಕ ಆಟಗಳಂತೆ ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಂಡವುಗಳಲ್ಲ. ಜನಪದ ಆಟಗಳಿಗೆ ಲಿಖಿತ ದಾಖಲೆಗಳಿಲ್ಲ. ಪ್ರಯೋಗಗಳನ್ನು ಆಧರಿಸಿದಂಥವು ಮತ್ತು ಅನುಕರಣೆಯ ಮೂಲಕ ಬೆಳೆದು ಬಂದವುಗಳು. ಊರಿಂದೂರಿಗೆ, ದೇಶದಿಂದ ದೇಶಕ್ಕೆ ವಲಸೆ ಬಂದವುಗಳು.

ಸಾಮಾನ್ಯವಾಗಿ ಜನಪದ ಆಟಗಳು ನಿರಪಾಯಕಾರಿಯಾದವುಗಳು, ಸಹಜಸ್ಫೂರ್ತಿಯಿಂದ ಅರಳಿದವುಗಳು, ವ್ಯಯರಹಿತವಾದವುಗಳು, ಸರಳವಾದವುಗಳು. ಮನರಂಜನೆಯೊಂದಿಗೆ ಬದುಕಿನ ಆರೋಗ್ಯ ಸೂತ್ರಗಳನ್ನು ಕಲಿಸಿಕೊಡುತ್ತವೆ. ಈ ಆಟಗಳಲ್ಲಿ ಬಳಸಲಾಗುವ

ಸಲಕರಣೆಗಳು ನಿಸರ್ಗದತ್ತವಾದವುಗಳು. ಗಾಜಿನ ಗೋಲಿ, ಮರದ ಬುಗುರಿ, ಗಜ್ಜುಗ, ಹುಣಸೆಬೀಜ, ಒಡೆದ ಮಡಿಕೆ ಚೂರು, ಬಳೆಯ ಚೂರು, ಪಾರಿವಾಳದ ಬೀಜ, ಚಿಂದಿಬಟ್ಟೆ ಸುತ್ತಿದ ಚಂಡು, ಕಾರೆ ಮರದ ತುಂಡಿನ ದಾಂಡು, ಆಲದ ಮರದ ತ್ವೊಕ್ಕಿನ ಚಿಣ್ಣಿ. ಮುರಿದು ಬಿಸಾಡಿದ ಕಡ್ಡಿಗಳು, ನಿಂತಲ್ಲಿ ಕುಳಿತಲ್ಲಿ ನೆಲದ ಮೇಲೆ ಗೆರೆಎಳೆದು ಸಿದ್ಧಪಡಿಸಬಹುದಾದ ಕ್ರೀಡಾಂಗಣ ಇತ್ಯಾದಿ.

ಮೇಲಿನ ಎಲ್ಲಾ ವಿಚಾರಗಳನ್ನು ಆಧರಿಸಿ ಕೆಳಕಂಡಂತೆ ಜನಪದ ಆಟಗಳ ಲಕ್ಷಣಗಳನ್ನು ಪಟ್ಟಿಮಾಡಬಹುದು.

1) ಜನಪದ ಆಟಗಳಲ್ಲಿ ಯಾರು ಬೇಕಾದರೂ ಮುಕ್ತವಾಗಿ ಪಾಲ್ಗೊಳ್ಳಬಹುದು. ಇಲ್ಲಿ ಆಟಗಾರ–ಪ್ರೇಕ್ಷಕ ಎಂಬ ಭೇದವಿರುವುದಿಲ್ಲ. ಒಂದು ಬಾರಿಗೆ ಒಬ್ಬರು ಇಲ್ಲವೆ ಇಬ್ಬರು ಅಥವಾ ಗುಂಪು ಆಡಬಹುದು. ಉದಾಹರಣೆಗೆ : ಅಣ್ಣೆಕಲ್ಲಾಟ, ಪಗಡೆಯಾಟ, ಹಳ್ಳಗುಳಿಮಣೆಯಾಟ, ಉಪ್ಪುಪ್ಪುಕಡ್ಡಿ, ಗೋಲಿಯಾಟ, ಬುಗುರಿಯಾಟ ಇತ್ಯಾದಿಗಳನ್ನು ಏಕಕಾಲಕ್ಕೆ ಒಬ್ಬರು ಅಥವಾ ಇಬ್ಬರು ಅಥವಾ ಗುಂಪು ಆಡಬಹುದು. ಕುಂಟೆಬಿಲ್ಲೆ, ಹಗ್ಗದಾಟ ಇಬ್ಬರು ಆಡುವ ಆಟಗಳು. ಕುದುರೆ ಆಟ, ಮಳ್ಳೆ ಬಂದೊ ಗಿಳ್ಳಿಪೋ, ಕುಕ್ಕರು ಬಸವಿ, ಕುಂತಿ–ನಿಂತಿ, ಲಗೋರಿ, ಅಳೀರ್ ಗುಡುಗುಡು ಆಟಗಳು ಗುಂಪಿನಲ್ಲಿ ಆಡುವ ಆಟಗಳು.

2) ಜನಪದ ಆಟಗಳು ಕ್ರಿಯಾತ್ಮಕವಾದುವುಗಳು. ಈ ಕ್ರಿಯೆಯಲ್ಲಿ ಆಟಗಳಲ್ಲಿ ಬಳಸುವ ಸಲಕರಣೆಗಳ ಜೊತೆಗೆ ದೇಹದ ಅವಯವಗಳೂ ಸಹ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುತ್ತವೆ.

3) ಆಟಗಳು ಶಾಬ್ದಿಕ ಗುಣವನ್ನು ಹೊಂದಿವೆ. ಜನಪದ ಆಟಗಳಲ್ಲಿ ಗೀತ ಮತ್ತು ಸಂಭಾಷಣೆ ಇದ್ದೇ ಇರುತ್ತದೆ. ಹೆಣ್ಣು ಮಕ್ಕಳ ಆಟಗಳಲ್ಲಂತೂ ಸರ್ವೇಸಾಮಾನ್ಯ. ಆಟ ಸಂಬಂಧಿ ಹಾಡು ಮತ್ತು ಸಂಭಾಷಣೆಯಲ್ಲಿ

ಪ್ರಾಸಗಳು, ಪ್ರಶ್ನೋತ್ತರಗಳು, ಒಗಟುಗಳು ಕೇಳಿಬರುತ್ತವೆ. ಹಾಡುಗಳು ಸರಳ, ಸುಂದರ, ಅರ್ಥಗರ್ಭಿತ, ನಾದಮಯತೆಯಿಂದ ಕೂಡಿರುತ್ತವೆ.

4) ನಾಟಕೀಯತೆ ಜನಪದ ಆಟಗಳಲ್ಲಿ ಎದ್ದು ಕಾಣುವ ಲಕ್ಷಣ. ಅಜ್ಜಿಯಾಟ, ಅಡುಗೆಯಾಟ, ಮದುವೆಯಾಟ ಮುಂತಾದವುಗಳಲ್ಲಿನ ಅಭಿನಯವು ಹೆಚ್ಚಿನ ನಾಟಕೀಯತೆಯಿಂದ ಕೂಡಿರುತ್ತದೆ.

5) ಸಾಮಾನ್ಯವಾಗಿ ದೊಡ್ಡವರು ಆಡುವ ಆಟಗಳೆಲ್ಲಾ ಒಂದೇ ಕಡೆ ಕುಳಿತು ಆಡುವ ಆಟಗಳು. ಉದಾಹರಣೆಗೆ ಪಗಡೆಯಾಟ, ಚದುರಂಗ, ಹುಲಿಕುರಿ ಆಟ, ಹಾವು-ಏಣಿ ಆಟ ಇತ್ಯಾದಿ.

6) ಮಕ್ಕಳ ಆಟಗಳು ಗಣಿತ ಜ್ಞಾನವನ್ನು ಒಳಗೊಂಡಿರುತ್ತವೆ. ಈ ಆಟಗಳಲ್ಲಿ ಎಣಿಕೆಯೇ ಪ್ರಧಾನವಾಗಿರುತ್ತದೆ. ಮಕ್ಕಳಿಗೆ ಚಿಕ್ಕಂದಿನಲ್ಲೇ ಲೆಕ್ಕ ಕಲಿಸುವ ದೃಷ್ಟಿಯಿಂದ ದೊಡ್ಡವರು ಈ ಆಟಗಳನ್ನು ಹೇಳಿಕೊಟ್ಟಿರುವ ಸಾಧ್ಯತೆಗಳಿವೆ. ಉದಾ: ಅಣ್ಣೆಕಲ್ಲಾಟ.

7) ಜನಪದ ಆಟಗಳು ಸ್ಥಾಯಿಯಾದವುಗಳಲ್ಲ. ಸಂಚಾರಿ ಗುಣವನ್ನು ಹೊಂದಿರುವುದರಿಂದ ಪ್ರಾದೇಶಿಕ ಭಿನ್ನತೆಗಳು ಕಂಡುಬರುತ್ತವೆ.

8) ನೆಲದ ಸಂಸ್ಕೃತಿಯೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ.

9) ಧಾರ್ಮಿಕ ವಿಧಿ ವಿಧಾನಗಳು, ಆಚರಣೆಗಳು, ಕ್ರಿಯಾವಿಧಿಗಳೊಂದಿಗೆ ತಳುಕುಹಾಕಿಕೊಂಡಿವೆ.

10) ಜನಪದ ಆಟಗಳನ್ನು ಅನುಕರಣೆ ಮತ್ತು ಪ್ರಯೋಗಗಳ ಮೂಲಕವೇ ಕಲಿಯಬೇಕೇ ಹೊರತು ನಾಗರಿಕ ಆಟಗಳ ರೀತಿಯಲ್ಲಿ ತರಬೇತುದಾರರ ಮೂಲಕ ಕಲಿಯಲು ಬರುವುದಿಲ್ಲ.

ಜನಪದದ ಇತರ ಪ್ರಕಾರಗಳಂತೆಯೇ ಜನಪದ ಆಟಗಳು ತಮ್ಮದೇ ಆದ ಅನನ್ಯತೆಯನ್ನು ಹೊಂದಿರುವುದರಿಂದ ಅವುಗಳ ಲಕ್ಷಣಗಳನ್ನು

ನಿರ್ದಿಷ್ಟ ಚೌಕಟ್ಟಿನಲ್ಲಿ ಬಂಧಿಸಲು ಸಾಧ್ಯವಿಲ್ಲ. ಸಮುದಾಯದ ಧಾರ್ಮಿಕ ಹಿತಾಸಕ್ತಿಗಳೊಂದಿಗೆ ನಿಕಟವಾಗಿ ಬೆರೆತಿರುವ ಆಟಗಳು ಕಾಲ, ದೇಶ, ಪರಿಸರ, ಸ್ವಭಾವಗಳಿಗೆ ಅನುಗುಣವಾಗಿ ತನ್ನ ಲಕ್ಷಣಗಳನ್ನು ವಿಸ್ತರಿಸಿಕೊಳ್ಳುತ್ತಾ ರೂಪಾಂತರಿಸಿಕೊಳ್ಳುತ್ತಾ ಚಲಿಸುತ್ತವೆ.

1.3 **ಆಟಗಳ ವರ್ಗೀಕರಣ** : ಜನಪದ ಆಟಗಳು ವಯೋಗುಣಕ್ಕನುಗುಣವಾಗಿ, ಪ್ರದೇಶಕ್ಕನುಗುಣವಾಗಿ, ಸಂದರ್ಭಕ್ಕನುಗುಣವಾಗಿ ಬದಲಾಗುತ್ತಾ ಹೋಗುವುದರಿಂದ ಜನಪದದ ಇತರ ಪ್ರಕಾರಗಳ ವರ್ಗೀಕರಣದಂತೆಯೇ ಜನಪದ ಆಟಗಳ ವರ್ಗೀಕರಣವು ಸಹ ಕ್ಲಿಷ್ಟಕರವಾದುದು. ವಿದೇಶಿ ಜನಪದ ವಿದ್ವಾಂಸರಾದ ಮರಿಯಾ ಲೀಚೆ ಅವರು ಆಟಗಳ ವರ್ಗೀಕರಣ ವಿಧಾನವೇ ಸರಿಯಲ್ಲ ಎಂದು ಅಭಿಪ್ರಾಯಪಡುತ್ತಾರೆ. ಏಕೆಂದರೆ ಆಟಗಳಿಗೆ ಪ್ರತ್ಯೇಕ ವರ್ಗೀಕರಣದ ಅಗತ್ಯತೆಯು ಬೇಕಿಲ್ಲ ಎಂಬುದು ಅವರ ವಾದ. ಶಾರೀರಿಕ ಧರ್ಮ ಮತ್ತು ಮಾನಸಿಕ ಸ್ವಭಾವಗಳಿಗೆ ಅನುಗುಣವಾಗಿ ಆಟಗಳು ವ್ಯತ್ಯಾಸಗೊಳ್ಳುತ್ತಾ ಹೋಗುತ್ತವೆ. ಉದಾಹರಣೆಗೆ ಕುಂಟೆಬಿಲ್ಲೆ ಹೆಣ್ಣು ಮಕ್ಕಳ ಆಟ ಎಂಬುದಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳು ದೊಡ್ಡವರಾದ ಕೂಡಲೇ ಕುಂಟೆಬಿಲ್ಲೆಯಂತಹ ಆಟಗಳನ್ನು ಆಡುವಂತಿಲ್ಲ. ಹಿರಿಯರು, ಈ ಆಟ ಆಡಲು ಹೆಣ್ಣುಮಕ್ಕಳನ್ನು ನಿಷೇಧಿಸುತ್ತಾರೆ.

ಆಟಗಳಲ್ಲಿ ಕಂಡುಬರುವ ಮನರಂಜನೆ, ಶಾರೀರಿಕ ಕೌಶಲ್ಯ, ಸ್ಪರ್ಧೆ, ವಿನ್ಯಾಸ, ಪ್ರಾದೇಶಿಕ ಭಿನ್ನತೆ, ಆವರಣ, ಲಿಂಗಭೇದ ಇತ್ಯಾದಿಗಳನ್ನು ಗಮನದಲ್ಲಿರಿಸಿಕೊಂಡು ದೇಜಗೌ, ಎಲ್. ಆರ್. ಹೆಗಡೆ, ಡಾ. ಎಂ. ಎಸ್. ಲಠ್ಠೆ, ಪದ್ಮಪ್ರಸಾದ್, ಶಾಂತಿನಾಯಕ, ದೇವೇಂದ್ರಕುಮಾರ ಹಕಾರಿ, ಡಾ. ಅರವಿಂದ ಮಾಲಗತ್ತಿ, ಪ್ರೊ. ಎಚ್. ಜೆ. ಲಕ್ಕಪ್ಪಗೌಡ ಮೊದಲಾದ ವಿದ್ವಾಂಸರು ಹಲವುಬಗೆಯ ವರ್ಗೀಕರಣ ವಿಧಾನಗಳನ್ನು ರೂಪಿಸಿರುತ್ತಾರೆ.

ಜನಪದ ಆಟಗಳನ್ನು ಮಕ್ಕಳು ಮತ್ತು ದೊಡ್ಡವರು ಕೂಡಿಯೇ ಶತಶತಮಾನಗಳಿಂದ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಹಬ್ಬ ಹರಿದಿನಗಳಲ್ಲಿ ಜಾತ್ರೆ ಉತ್ಸವಗಳಲ್ಲಿ, ಬಿಡುವಿನ ದಿನಗಳಲ್ಲಿ ಊರ ಮನೆಗಳಲ್ಲಿ, ಊರ ಹೊರಗಿನ ಬಯಲುಗಳಲ್ಲಿ ಗುಂಪಾಗಿ ಆಡಿ ಸಂಭ್ರಮಿಸಿಕೊಂಡು ಬಂದಿದ್ದಾರೆ. ಜನಪದ ಆಟಗಳ ಸ್ವರೂಪವನ್ನು, ವಿನ್ಯಾಸವನ್ನು ಗಮನದಲ್ಲಿರಿಸಿಕೊಂಡು ಸ್ಥೂಲವಾಗಿ ಎಲ್ಲಾ ಆಟಗಳನ್ನು ಒಳಾಂಗಣ ಆಟಗಳು – ಹೊರಾಂಗಣ ಆಟಗಳು ಮತ್ತು ಆಚರಣಾ ಸಂಬಂಧಿ ಆಟಗಳೆಂದು ಮೂರು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು. ಅಧ್ಯಯನದ ಅನುಕೂಲಕ್ಕೆ ಈ ವಿಂಗಡಣೆಯು ಸಹಾಯಕ ವಾಗುತ್ತದೆಂಬುದು ನನ್ನ ಗ್ರಹಿಕೆ.

ಮನೆಯ ಒಳಗೆ ಅಥವಾ ಮನೆಯ ಪರಿಸರದಲ್ಲಿ ಆಡುವಂಥ ಆಟಗಳು ಒಳಾಂಗಣ ಆಟಗಳು. ಗ್ರಾಮೀಣ ಪ್ರದೇಶಗಳಲ್ಲಿ ಚಿಕ್ಕ ಮಕ್ಕಳು ಮತ್ತು ಹುಡುಗಿಯರನ್ನು ಮನೆಯಿಂದ ಅಷ್ಟು ಸುಲಭವಾಗಿ ಹೊರಗೆ ಕಳುಹಿಸುತ್ತಿರಲಿಲ್ಲ. ಮನೆಯ ಮುಂದಣ ಜಗಲಿ ಮತ್ತು ಮನೆಯ ಹಿಂದಿನ ಹಿತ್ತಿಲು, ಮನೆಯ ಸುತ್ತಲ ಪರಿಸರವನ್ನು ಬಿಟ್ಟರೆ ಈ ಮಕ್ಕಳು ಎಲ್ಲೂ ಹೊರಗೆ ಹೋಗುವಂತಿರಲಿಲ್ಲ. ಸೂಕ್ಷ್ಮ ಸ್ವಭಾವದ, ಮೃದು ಮನಸ್ಸಿನ ಹೆಣ್ಣು ಮಕ್ಕಳು ಈ ಪರಿಸರವನ್ನೇ ತಮ್ಮ ಆಟದ ಬಯಲನ್ನಾಗಿಸಿಕೊಂಡು ರೂಢಿಗೆ ತಂದ ಆಟಗಳೇ ಒಳಾಂಗಣ ಆಟಗಳು. ಅಣ್ಣೆಕಲ್ಲಾಟ, ಚದುರಂಗದಾಟ, ಪಗಡೆಯಾಟ, ಹಳಗುಣಿಮನೆ ಆಟ. ಚೌಕಾಬಾರ. ಕಂಬದಾಟ, ಕಣ್ಣಾಮುಚ್ಚಾಲೆ ಮುಂತಾದವು ಮನೆಯ ಒಳ ಪರಿಸರದಲ್ಲಿ ಚಿಕ್ಕಮಕ್ಕಳು, ಹೆಣ್ಣುಮಕ್ಕಳು ಮತ್ತು ಹೆಂಗಸರ ಆಟಗಳಾಗಿ ಪರಿಣಮಿಸಿದವು.

ಊರ ಹೊರಗಿನ ಬಯಲು, ದನಕರು ಕುರಿ ಎಮ್ಮೆ ಮೇಯಿಸುವ ವಿಶಾಲವಾದ ಹುಲ್ಲುಗಾವಲುಗಳು, ಗುಡಿ ಮುಂದಿನ ರಂಗ, ಮನೆಯ

ಮುಂದಿನ ಬೀದಿ, ಸಂದಿಗೊಂದಿ, ಗಲ್ಲಿಗಳಲ್ಲಿ ಆಡುವಂತಹ ಆಟಗಳು ಹೊರಾಂಗಣ ಆಟಗಳಾಗಿ ಪರಿಣಮಿಸಿದವು. ಕುಂಟೆಬಿಲ್ಲೆ, ಚಿಣ್ಣಿಕೋಲು, ಲಗೋರಿ, ಚಂಡಾಟ, ಬುಗುರಿಯಾಟ, ಮರಕೋತಿಯಾಟ, ಗೋಲಿಯಾಟ ಕಲ್ಲೋಮಣ್ಣೋ, ಅಳೀರ್ ಗುಡುಗುಡು, ದೊಣ್ಣೆವರಸೆ, ಕುಸ್ತಿ ಮುಂತಾದುವು ಗಂಡು ಮಕ್ಕಳು ಮತ್ತು ಗಂಡಸರ ಆಟಗಳಾದವು.

ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು, ಮದುವೆ, ಹರಕೆ ಸಂದರ್ಭಗಳಲ್ಲಿ ನಡೆಯುವಂತಹ ಆಟಗಳು ಆಚರಣಾ ಸಂಬಂಧಿ ಆಟಗಳಾದವು. ಈ ಆಟಗಳಲ್ಲಿ ಧಾರ್ಮಿಕತೆ ಪ್ರಧಾನವಾಗಿರುತ್ತದೆ. ವಿನೋದದಿಂದಲೂ ಕೂಡಿರುತ್ತವೆ. ಉದಾಹರಣೆಗೆ ಮದುವೆ ಸಂದರ್ಭಗಳಲ್ಲಿ ಗಂಡು ಹೆಣ್ಣಿನ ಆಟಗಳು, ಹರಕೆ ಕಂಬಳ ಇತ್ಯಾದಿ.

ಒಳಾಂಗಣ ಮತ್ತು ಹೊರಾಂಗಣ ಆಟಗಳು ಅದಲು ಬದಲಾಗಬಹುದು. ಆದರೆ ಆಚರಣಾ ಸಂಬಂಧಿ ಆಟಗಳು ಅದಲು ಬದಲಾಗುವುದಿಲ್ಲ. ಒಳಾಂಗಣದಲ್ಲಿನ ಮಕ್ಕಳು, ಹೆಣ್ಣು ಮಕ್ಕಳು, ಹೆಂಗಸರು ಬೀದಿಗೆ ಬಂದು ಆಡಬಹುದು. ಹೊರಾಂಗಣದ ಗಂಡುಮಕ್ಕಳು ಒಳಾಂಗಣ ಪ್ರವೇಶಿಸಿ ಅಲ್ಲಿನ ಆಟಗಳಲ್ಲಿ ಪಾಲ್ಗೊಳ್ಳಬಹುದು. ಇದರಲ್ಲಿ ಯಾವುದೇ ನಿಷೇಧಗಳಿಲ್ಲ.

ಚಿಕ್ಕಮಕ್ಕಳು ಹೆಚ್ಚಾಗಿ ಕಣ್ಣಾಮುಚ್ಚಾಲೆ, ಗೊಜ್ಲಾಂಬಿಜ್ಲೆ ಆಟ, ಕುಂತಿ–ನಿಂತಿ ಆಟ, ಕಣ್ಣುಕಟ್ಟಾಟ, ಸರಾಪ್‌ಆಟ, ಹಸು–ಹುಲಿ ಆಟ, ಟೋಪಿಯಾಟ, ಮಳೆ ಬಂತು ಗಿಳ್ಳಿಪೋ ಆಟ, ಕಲ್ಲು ಅವಿಸುವಾಟ, ಗಿರಿಗಿಟ್ಲೆ, ಕುಂಬಳಕಾಯಿ ಆಟ, ಮದುವೆಯಾಟ, ಮನೆಯಾಟ, ಗೊಂಬೆಯಾಟ, ಕೂಸುಮರಿ ಆಟಗಳನ್ನು ಆಡುತ್ತಾರೆ.

ಹುಡುಗರು ಹೆಚ್ಚಾಗಿ ಚಂಡಾಟ, ಅಳೀರ್ ಗುಡುಗುಡು, ಲಗ್ಗೆ

ಆಟ, ಲಗೋರಿ ಆಟ, ಮರಕೋತಿ, ಗುಲ್ಲೋರಿಯೋ, ಐಸ್‌ಪೈಸ್, ಕಲ್ಲು ಕುಟಿಕುಟಿ, ನಂಬರ್ ಆಟ, ಚಿಣ್ಣಿದಾಂಡು, ಬುಗುರಿ, ಗೋಲಿಯಾಟ, ಕಾಲಿನ ಹೆಬ್ಬೆರಳು ಹಿಡಿದು ಕುಂಟುವ ಆಟ, ಹುಂಜ ಹ್ಯಾಟೆ ಆಟ, ಕುದುರೆ ಆಟ, ಕಳ್ಳಪೋಲಿಸ್, ಕೋತಿ ಆಟ ಇವೇ ಮೊದಲಾದವುಗಳನ್ನು ಆಡುತ್ತಾರೆ.

ಹುಡುಗಿಯರು ಸಾಮಾನ್ಯವಾಗಿ ಉಪ್ಪುಪ್ಪುಕಡ್ಡಿ, ಕುಂಟೆಬಿಲ್ಲೆ, ಅಣ್ಣೆ ಕಲ್ಲಾಟ, ಕಂಬದಾಟ, ಹಗ್ಗದಾಟ, ಬಳೆಚೂರಾಟ, ಕುಂಟಾಟ, ಇತ್ಯಾದಿಗಳನ್ನು ಹೆಚ್ಚಾಗಿ ಆಡುತ್ತಾರೆ. ಇನ್ನು ದೊಡ್ಡವರು, ಪಗಡೆಯಾಟ, ಪಚ್ಚಿಯಾಟ, ಅಳಗುಳಿಮಣೆ, ಘಟ್ಟಾಬಾರ, ಚೌಕಾಬಾರ, ರಾಜರಾಣಿ ಆಟ, ಹಾವುಏಣಿ ಆಟ, ಹುಲಿ ಕುರಿಯಾಟ, ಚದುರಂಗ, ಇಸ್ಪೀಟು, ಗಂಜೀಫ ಮುಂತಾದವುಗಳನ್ನು ಆಡುತ್ತಾರೆ,

ಸಾಮಾನ್ಯವಾಗಿ ಜನಪದ ಆಟಗಳು ಸ್ಥಳೀಯವಾಗಿ ಹೆಚ್ಚಿನ ವ್ಯತ್ಯಾಸವನ್ನೇನೂ ಹೊಂದಿರುವುದಿಲ್ಲ. ದೂರಾಂತರವನ್ನು ಗಮನಿಸಿದಾಗ ಮಾತ್ರ ಅಂದರೆ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸಗಳು ಗೋಚರಿಸುತ್ತವೆ. ಹೆಸರುಗಳಲ್ಲಿ ಭಿನ್ನತೆ ಇದ್ದರೂ ಆಟದ ಪ್ರದರ್ಶನದ ಆಶಯ ಮಾತ್ರ ಒಂದೇ ಆಗಿರುತ್ತದೆ. "ಹೊಯಿಗೆ ಆಟ (ಉತೂತ), ಕಣ್ ಕಣ್ಣಾಟ(ಕಣ್ಣಮುಚ್ಚಾಲೆ), ಗೊರಟಾಟ (ಕುಂಟಬಿಲ್ಲೆ), ಹಾಣೆಗೆಂಡೆ (ಚಿಣ್ಣಿಕೋಲು), ತಿಕ್ಕನಾಟ (ಗಚ್ಚುದಾಟ), ಗುಡುಗುಡಿ (ಉಡುತುತು), ಹಳ್ಳಕಾಟ(ಸುರುಸುರುಬತ್ತಿ), ಗುಡ್ನಾಟ(ಆಣಿಕಲ್ಲು), ಸಿರಿಯೋಮಿಗ್ಲೊ (ಸರಿಬೆಸ), ಚೆನ್ನೆಮಣೆ, ಜಿಬ್ಬಿಮನೆ, ಪಗಡೆ, ಪಗ್ಗ, ಚದುರಂಗ ಇಂಥ ನೂರಾರು ಆಟಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿವೆ. ಉಪ್ಪುಪ್ಪು ಕಡ್ಡಿ, ಕುಂಟೆಬಿಲ್ಲೆ, ಕಂಬದಾಟ, ಹಗ್ಗದಾಟ, ಗಿರಗಿಟ್ಟಿ, ಕುಕ್ಕುರು ಬಸವಿ, ಕಲ್ಲೋಮಣ್ಣೋ, ಕುಂತಿ ನಿಂತಿ ಆಟ, ಹಳ್ ಮನೆಗುಳಿ, ಆಣಿಕಲ್ಲು,

ಮಳ್ಳೆ ಬಂತು ಗಿಳ್ಳಿಮೋ, ಘಟ್ಟಬಾರ" ಇಂಥ ಹಲವಾರು ಆಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಾಣಸಿಗುತ್ತವೆ. ಅದೇ ರೀತಿ ಕಟ್ಟಿಮಣೆ, ಬಳೆಪಿಂಗದ ಆಟ, ಚಿಟ್ಟಿಮಳೆ ಆಟ, ಉಪ್ಪೇರುಪ್ಪು ಆಟ, ವಡೆ ಪಾಯ್ಸ ಆಟ, ಕಳ್ಳಪೋಲೀಸ್ ಆಟ, ಉದ್ದಿನ ಮೂಟೆ ಆಟ, ಹುಲಿಕುರಿ ಆಟ, ಆನೆ ಕುರಿ ಆಟ, ಹುಣಸೆ ಬೀಜದ ಆಟ, ಉಪ್ಪುಪ್ಪು ಕಡ್ಡಿ ಆಟ, ಕಲ್ಲೂಪರಾಣೆ ಆಟ, ಕಣ್ಣು ಮುಚ್ಚಾಲೆ ಆಟ, ಕುಂಟಾಬಿಲ್ಲೆ, ಕೊಕ್ಕೋ ಆಟ, ಗೋಲಿಯಾಟ, ಬುಗುರಿಯಾಟ, ಗುಡ್‌ಗುಡಾನ್ ಆಟ, ಮರಕೋತಿ ಆಟ, ಐಸ್‌ಪೈಸ್ ಆಟ, ಚಿನ್ನಿದಾಂಡು, ಟೋಪಿ ಆಟ, ಗಜಗದಾಟ, ರತ್ತೋರತ್ತೋ ಆಟ ಇಂಥ ಹಲವು ಬಗೆಯ ಆಟಗಳನ್ನು ಮೈಸೂರು ಸೀಮೆಯಲ್ಲಿ ಮಕ್ಕಳು ಆಡುವುದುಂಟು." (ಎಂ.ಎಸ್.ಲಠ್ಠೆ : ಕರ್ನಾಟಕ ಜಾನಪದ ಸಮೀಕ್ಷೆ, ಪು.321)

ಗಜಗದಾಟ, ಪಗಡಿ ಆಟ, ಕುಪ್ಪಿ ಆಟ, ಗಚ್ಚಿನಾಟ ಬಾವಾ ಕುಂತಿತ್ತು ಅಡ್ಡಗ್ವಾಡಿ ಮ್ಯಾಲ. ಸಾರಸಾರ ಬಾಳಿಕಾಯಿ, ಇಮಾನ ಆಟ. ಟಿಕಳಿ ಆಟ. ದಹಿ ಬೇಕೇನ ದಹಿ, ಗೆಜ್ಜೆ ಗಿಲಿಗಿಲಿ, ಕಳ್ಳರಾಟ, ಫೌಜಿಫೌ, ಇಸ್ಸಿಸ್ಸಾ, ಅಚ್ಚಚ್ಚಾ, ಉಳ್ಳಿ ಉಳ್ಳಿ ಲೇಸು, ಆನಿ ಬಂತಾನಿ, ಕುಟ್‌ಕುಟಕುರ್, ಚಿಣ್ಣಿಫಣಿ, ಕಾನಕಾನುತ್ತತ್ತ್ಯೋ, ಕುದುರಿ ಆಟ, ಲೋಡ ಲೋಡ ತಿಮ್ಮಯ್ಯ, ಚಾರ ಫತ್ತರ ಚಾರ, ತೀತೀ ತುಡುಂಪತ್ತಾ, ಬೈಟಗುಬ್ಬಿ ಬೈಟ, ಹತ್ತಿ ಕಟಗಿ ಬತ್ತಿ ಕಟಗಿ, ಕಳ್ಯಾಮಿಳ್ಯಾ, ಖಿದಲ್‌ಬಿದಲ್, ಕೊಕ್ಕಾ ಬತ್ತಿ ಕ್ವಾಡಾ ಬತ್ತಿ ಮುಂತಾದ ನೂರಾರು ಆಟಗಳು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತವೆ.

ಹುಡುಗರು ಮತ್ತು ಹುಡುಗಿಯರು ಆಡಬಹುದಾದ ಒಳಾಂಗಣ ಆಟಗಳಲ್ಲಿ ಕಾಂಚನ ಮಿಣಿ ಮಿಣಿ, ಭೀಮ ಕೀಚಕ, ಅಟ್ಟಮುಟ್ಟ, ದಂಡ ಮುಟ್ಟಿಸುವ ಆಟ, ಗೆಜ್ಜೆಕಟ್ಟು, ತೋಳ್ಮೆಟ್ಟಿಲು, ಕಲ್ಲಾಟ, ಕರಡಿ ಆಟ,

ಬೀಸು ಹೊಡೆತ, ನೆನಪಿನಾಟ, ಮಹಾಬಲ, ಕವಡೆ ಆಟ, ಚನ್ನೆಮಣೆ, ಚೌಕಾಬಾರ, ಕಡ್ಡಿ ಆಟ, ಆನೆ ಆಟ, ದಿಂಬಾಟಗಳಿದ್ದರೆ, ಹೊರಾಂಗಣ ಆಟಗಳಲ್ಲಿ ಉಪ್ಪುಗೋಣಿ, ಹೆಜ್ಜೆ ಓಟ, ಕುಂಟನ ತಂಟೆ, ಅಂಟುಕಾಲಿನ ಓಟ, ಹಾವು–ಮುಂಗಸಿ, ದನ–ಹುಲಿ, ಬಣ್ಣಾಬಣ್ಣಾ, ಜಿಬ್ಬೆ, ಕಪ್ಪೆ ಕಾಲು, ಕಾಗೆ–ಗಿಳಿ ಮುಂತಾದ ಆಟಗಳಿವೆ.

ಮೇಲಿನ ಎಲ್ಲಾ ಆಟಗಳ ವಿವರಣೆಗಳನ್ನು ಗಮನಿಸಿದಾಗ ಜನಪದ ಆಟಗಳ ವರ್ಗೀಕರಣ ಎನ್ನುವಂಥದ್ದು ವಾತಾವರಣದಷ್ಟೇ ಸಾರ್ವತ್ರಿಕವಾದುದರಿಂದ ನಿರ್ದಿಷ್ಟ ಚೌಕಟ್ಟಿನಲ್ಲಿ ಹಿಡಿದಿಡಲು ಸುಲಭ ಸಾಧ್ಯವಲ್ಲ ಎಂಬುದು ಅರಿವಿಗೆ ಬರುತ್ತದೆ.

1.4 **ಆಟಗಳ ಪ್ರದರ್ಶನ ಮಾಹಿತಿ** : ತುಳು ನಾಡಿನ ಜನಪದ ಆಟಗಳನ್ನು ಕುರಿತು ಮಹಾಪ್ರಬಂಧ ಬರೆದಿರುವ ಡಾ.ಗಣನಾಥ ಎಕ್ಕಾರು ಅವರು ಪ್ರದರ್ಶನ ಮಾಹಿತಿ ದೊರೆತಿರುವ 154 ಆಟಗಳು ಮತ್ತು ಮಾಹಿತಿ ದೊರೆತಿರದ 19 ಆಟಗಳನ್ನು ದಕ್ಷಿಣ ಕನ್ನಡ ಜಿಲ್ಲೆ ಒಂದರಲ್ಲೇ ಗುರುತಿಸಿದ್ದಾರೆ. ಇನ್ನು ಮಂಡ್ಯ, ಮೈಸೂರು, ಹಾಸನ ಪ್ರದೇಶದಲ್ಲಿ ಸುಮಾರು 150ಕ್ಕೂ ಹೆಚ್ಚಿನ ಆಟಗಳ ಮಾಹಿತಿ ಲಭ್ಯವಿದೆ. ಉತ್ತರ ಕರ್ನಾಟಕ, ಉತ್ತರ ಕನ್ನಡ ಜಿಲ್ಲೆ, ಬಯಲುಸೀಮೆ ಪ್ರದೇಶಗಳಲ್ಲಿನ ಆಟಗಳ ವಿವರಗಳನ್ನು ಗಮನಿಸಿದರೆ, ಕರ್ನಾಟಕದಾದ್ಯಂತ ಸುಮಾರು 400ಕ್ಕೂ ಹೆಚ್ಚು ಜನಪದ ಆಟಗಳ ಪ್ರದರ್ಶನದ ವಿವರಗಳನ್ನು ಸಂಗ್ರಹಿಸಬಹುದಾಗಿದೆ. ಇಷ್ಟು ವ್ಯಾಪಕವೂ ಸಮೃದ್ಧವೂ ಆದ ಜನಪದ ಆಟಗಳ ಪ್ರದರ್ಶನ ಮಾಹಿತಿಯನ್ನು ದಾಖಲಾತಿಯ ದೃಷ್ಟಿಯಿಂದ ದೃಶ್ಯ ಮತ್ತು ಅಕ್ಷರ ಮಾಧ್ಯಮಗಳಲ್ಲಿ ಹಿಡಿದಿರಿಸಬೇಕಾದದ್ದು ಅತ್ಯಂತ ಜರೂರಾಗಿ ಆಗಬೇಕಾದ ಕೆಲಸ.

ಸದ್ಯಕ್ಕೆ, ಕೆಲವು ವಿಶಿಷ್ಟವಾದ ಆಟಗಳ ಪ್ರದರ್ಶನ ಮಾಹಿತಿಯನ್ನು ಈ ಕಿರುಪುಸ್ತಕದಲ್ಲಿ ಯಾದೃಚ್ಛಿಕವಾಗಿ ಪ್ರಸ್ತಾಪಿಸಲು ಇಚ್ಛಿಸುತ್ತೇನೆ.

1.4.1 **ಅಕ್ಕಮಕ್ಕ ಚಂಡು** : ಈ ಆಟವು ಬಯಲು ಸೀಮೆಯಲ್ಲಿ ಚಿಕ್ಕಮಕ್ಕಳು ಆಡುವ ಆಟ. ಹೆಣ್ಣಾಗಿರಬಹುದು. ಗಂಡಾಗಿರಬಹುದು. ಮನೆಯ ಒಳಗಿರಬಹುದು. ಹೊರಗಿರಬಹುದು. ಇಬ್ಬರು ಮಕ್ಕಳು ಪರಸ್ಪರ ಎದುರು ಬದುರಾಗಿ ನಿಂತು, ತಮ್ಮ ಕೈ ಬೆರಳುಗಳನ್ನು ಸೇರಿಸಿ ಹಿಡಿದುಕೊಳ್ಳುತ್ತಾರೆ. ಅನಂತರ ತಿರುವುಮುರುವಾಗಿ ಕೈಗಳು ಕೊರಳ ಹಿಂಭಾಗಕ್ಕೆ ಬರುವಂತೆ ಹೆಣೆದುಕೊಂಡು ಸುತ್ತಲಾರಂಭಿಸುತ್ತಾರೆ. ಸುತ್ತುವಾಗ ಇಬ್ಬರ ಮುಖಗಳೂ ವಿರುದ್ಧ ದಿಕ್ಕಿಗೆ ಬರುತ್ತವೆ. ಸುತ್ತುತ್ತಾ ಸುತ್ತುತ್ತಾ ಅತ್ಯಂತ ಸುಶ್ರಾವ್ಯವಾಗಿ ರಾಗಬದ್ಧವಾಗಿ ಕೆಳಗಿನ ಶಿಶುಪ್ರಾಸವನ್ನು ಹೇಳುತ್ತಾರೆ.

ಅಕ್ಕ ಮಕ್ಕ ಚಂಡು
ಏರಿ ಮ್ಯಾಲೆ ದಂಡು
ಕಲ್ಲಾಪುರಕ್ಹೋಗಿ
ಕೊಮ್ಮಿನ ಜ್ವಾಳ ತಂದು
ದಡ್ಡ ಬಡ್ಡನ್ಹಿಡಿದು
ಗಂಡನಿಗೆ ಗಂಜಿ
ಮಿಂಡನಿಗೆ ಬುತ್ತಿ
ಹೊಸಳ್ಳಿ ಗೌಡ
ಸೊಸೆ ಕರಕೊಂಡು ಹೊಂಟ
ಮಾದಳ್ಳಿ ಗೌಡ
ಮಗಳ ಕರಕೊಂಡು ಬಂದ
ಹತ್ ನನ್ನ ಸವತಿ
ಹಿತ್ತಾಳೆ ಮೂಗ್ತಿ

ಅಕ್ಕಮಕ್ಕ ಚಂಡು ಆಟದೊಂದಿಗೆ ಹೊರಹೊಮ್ಮುವ ಈ ಶಿಶುಪ್ರಾಸದಲ್ಲಿ ಪ್ರಸ್ತಾಪವಾಗುವ ಊರಿನ ಹೆಸರುಗಳು ಸಂದರ್ಭ-ಸನ್ನಿವೇಶಗಳಿಗೆ ತಕ್ಕಂತೆ ಬದಲಾಗುತ್ತವೆ. ಈ ಶಿಶುಪ್ರಾಸದ ಅರ್ಥಸ್ಪಷ್ಟತೆಯ ಅರಿವು ಮಕ್ಕಳಿಗಿಲ್ಲದಿದ್ದರೂ ಹಾಡಿಕೊಂಡು ಕುಣಿಯುವಾಗ ಆನಂದ ಉಕ್ಕೇರುತ್ತದೆ ಎನ್ನುವುದರಲ್ಲಿ ಸಂದೇಹವಿಲ್ಲ.

1.4.2 **ಅಜ್ಜಿ ಸೂಜಿ** : ಉತ್ತರ ಕನ್ನಡ ಜಿಲ್ಲೆಯ ಹೆಣ್ಣುಮಕ್ಕಳ ಆಟ. ಈ ಆಟವನ್ನು ಮನೆಯ ಒಳಗೆ ಮತ್ತು ಹೊರಗೆ ಎಲ್ಲಿ ಬೇಕಾದರೂ ಆಡಬಹುದು. ಈ ಆಟದಲ್ಲಿ ಒಂದು ಹುಡುಗಿ ಅಜ್ಜಿಯ ಪಾತ್ರ ವಹಿಸುತ್ತಾಳೆ, ಉಳಿದವರು ಆಟಗಾರರು. ಅಜ್ಜಿ ಪಾತ್ರಧಾರಿ ಹುಡುಗಿ ಬಿದ್ದು ಹೋದ ಸೂಜಿಯನ್ನು ಹುಡುಕುವ ನಟನೆ ಮಾಡುತ್ತಿರುತ್ತಾಳೆ. ಆಗ ಅಲ್ಲಿಗೆ ಬಂದ ಆಟಗಾರರು ಅಜ್ಜಿಯನ್ನು ಕೆಳಗಿನಂತೆ ಪ್ರಶ್ನಿಸುತ್ತಾರೆ:

ಅಜ್ಜಿ ಅಜ್ಜಿ ಎಂತ ಮಾಡ್ತೆ ?
ಸೂಜಿ ಹುಡ್ಕ್ತೆ
ಸೂಜೆಂತಕ್ಕೆ ?
ಚಂಚಿ ಹೊಲೂಕೆ
ಚಂಚಿ ಎಂತಕ್ಕೆ ?
ದುಡ್ ತುಂಬೂಕೆ
ದುಡ್ ಎಂತಕ್ಕೆ ?
ಕತ್ತಿ ಮಾಡಿಸೂಕೆ
ಕತ್ತಿ ಎಂತಕ್ಕೆ ?
ನಿಮ್ಮೆಲ್ಲಾ ಹಿಡ್ದ್ ಕಡೋಕೆ. (ಶಾಂತಿನಾಯಕ)

ಕೊನೆಯ ಸಾಲನ್ನು ಹೇಳುತ್ತಾ ಬಗ್ಗಿ ಸೂಜಿ ಹುಡುಕುತ್ತಿದ್ದ ಅಜ್ಜಿಯು

ಸೊಂಟ ನೆಟ್ಟಗೆ ಮಾಡಿ ನೀಟಾಗಿ ನಿಂತ ಕೂಡಲೇ ಆಟಗಾರರೆಲ್ಲಾ ಓಡಿಹೋಗುತ್ತಾರೆ. ಅವರನ್ನೇ ಬೆನ್ನಟ್ಟಿದ ಅಜ್ಜಿಯು ಯಾರಾದರೊಬ್ಬರನ್ನು ಮುಟ್ಟಿಸಿದ ಪಕ್ಷದಲ್ಲಿ, ಮುಟ್ಟಿಸಿಕೊಂಡವರು ಅಜ್ಜಿಯಾಗುತ್ತಾರೆ. ಯಾರೂ ಅಜ್ಜಿಯ ಕೈಗೆ ಸಿಗದೆ, ಅಜ್ಜಿ ಸೂಜಿ ಹುಡುಕುತ್ತಿದ್ದ ಸ್ಥಳವನ್ನು ಬಂದು ಮುಟ್ಟಿದರೆ ಮೊದಲಿನ ಅಜ್ಜಿಯೇ ಮತ್ತೆ ಆಟದ ಪುನರಾವರ್ತನೆ ಮಾಡುತ್ತಾಳೆ. ಪ್ರಶ್ನೋತ್ತರ ರೂಪದಲ್ಲಿರುವ ಶಿಶಪ್ರಾಸವು ಮಕ್ಕಳಿಗೆ ನಾದಮಯತೆಯನ್ನು ಒದಗಿಸುತ್ತದೆ.

1.4.3 **ಅಣ್ಣೆಕಲ್ಲಾಟ** : ಹೆಣ್ಣುಮಕ್ಕಳು ಆಡುವ ಒಳಾಂಗಣ ಆಟ. ಗಜ್ಜುಗದ ಗಾತ್ರ ಇರುವ ದುಂಡನೆಯ ಐದು ಕಲ್ಲುಗಳಿಂದ ಎಷ್ಟು ಜನರಾದರೂ ಈ ಆಟವನ್ನು ಆಡಬಹುದು. ಎರಡು ಕಲ್ಲುಗಳಿಗೆ ಒಂದು 'ಅಚ್ಚು' ಎಂದು ಕರೆಯುವುದರಿಂದ ಈ ಆಟಕ್ಕೆ ಅಚ್ಚ ಕಲ್ಲಾಟ ಎಂಬ ಹೆಸರೂ ಇದೆ. ಆಟ ಆರಂಭಿಸುವ ಆಟಗಾರ್ತಿ ಮೊದಲು ಐದು ಕಲ್ಲುಗಳನ್ನು ಕೈಯೊಳಗಿನ ಮುಷ್ಟಿಯಲ್ಲಿ ಹಿಡಿದು ಕುಲುಕಿ ನೆಲದ ಮೇಲೆ ಎಸೆಯುತ್ತಾಳೆ. ನಂತರ ಐದರಲ್ಲಿ ಒಂದು ಕಲ್ಲನ್ನು ಮೇಲಕ್ಕೆಸೆದು ಅದು ಕೆಳಗೆ ಬೀಳುವಷ್ಟರಲ್ಲಿ, ನೆಲದ ಮೇಲಿನ ಉಳಿದ ನಾಲ್ಕರಿಂದ ಒಂದು ಕಲ್ಲನ್ನು ಎತ್ತಿಕೊಂಡು ಬೀಳುತ್ತಿರುವ ಕಲ್ಲನ್ನು ಹಿಡಿದುಕೊಳ್ಳುತ್ತಾಳೆ. ಮೇಲಿಂದ ಬೀಳುವ ಕಲ್ಲು ಕೈ ತಪ್ಪಿದರೆ ಆಟ ಸೋತಂತೆ. ಇದೇ ರೀತಿ ಐದು ಸಲ ಆಡುವುದಕ್ಕೆ ಒಂದು ಗುಚ್ಚಿ ಆಟ ಎನ್ನುತ್ತಾರೆ. ಇಂತಹ ಐದು ಗುಚ್ಚಿ ಆಟಗಳನ್ನು ಆಡುವರು. ಇದಾದ ನಂತರ ಎರಡು ಕಲ್ಲು, ಮೂರು ಕಲ್ಲು, ನಾಲ್ಕು ಕಲ್ಲುಗಳನ್ನು ಒಟ್ಟೊಟ್ಟಿಗೆ ಎತ್ತಿಕೊಳ್ಳುವರು. ಕೊನೆಯಲ್ಲಿ ಐದು ಕಲ್ಲುಗಳನ್ನು ಮೇಲೆಸೆದು ಬೊಗಸೆಯಲ್ಲಿ ಹಿಡಿದುಕೊಳ್ಳುವರು. ಅಣ್ಣೆಕಲ್ಲಾಟ ಆಡುವಾಗ ಕಲ್ಲಿಗೆ ಕಲ್ಲು, ಕೈಗೆ ಕೈ ತಾಗಬಾರದು. ಮೇಲೆ ಎಸೆಯುವ ಕಲ್ಲು ಕೆಳಗೆ ಬೀಳಬಾರದು. ಹಸ್ತ ಮತ್ತು ಬೆರಳುಗಳಿಗೆ

ಅತ್ಯುತ್ತಮವಾಗಿ ವ್ಯಾಯಾಮವನ್ನು ಒದಗಿಸುವ ಈ ಆಟದಲ್ಲಿ ಗುದ್ದಿನ ಆಟ, ಗೆದಿಯುವ ಆಟ, ಸೆಣೆಯುವ ಆಟ, ಗಿಚ್ಚಿಯಾಟ, ಐದು ಗುಂಜು ಆಟ ಮೊದಲಾದ ಬಗೆಗಳಿವೆ. ಅಣ್ಣೆ ಕಲ್ಲಾಟ ಆಡಿದರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಹಳ್ಳಿಗರಲ್ಲಿದೆ. ಇದರಿಂದಾಗಿ ಈ ಆಟವನ್ನು ಹಿರಿಯರು ನಿಷೇಧಿಸುತ್ತಾರೆ. ನಂಬಿಕೆಗಿಂತ ಹೆಚ್ಚಿನದು, ಹೆಣ್ಣುಮಕ್ಕಳು ಈ ಆಟ ಆಡುವಾಗ ಕಲ್ಲು ತಗಲಿ ಕೈಗಳಲ್ಲಿ ತೊಟ್ಟ ಬಳೆಗಳನ್ನು ಒಡೆದುಕೊಳ್ಳುತ್ತಾರೆ. ಮೇಲಿಂದ ಮೇಲೆ ಹೆಣ್ಣುಮಕ್ಕಳಿಗೆ ಸಂತೆ, ಪೇಟೆಗಳಿಂದ ಬಳೆಗಳನ್ನು ತರಬೇಕಾದ ಪ್ರಯಾಸ ಮತ್ತು ವೆಚ್ಚಕ್ಕಾಗಿ ಹಿರಿಯರು ಹೆಣ್ಣುಮಕ್ಕಳು ಅಣ್ಣೆಕಲ್ಲಾಟ ಆಡುವುದನ್ನು ನಿಷೇಧಿಸಿದ್ದಾರೆನ್ನಬಹುದು.

ಮತ್ತೊಂದು ರೀತಿಯಲ್ಲಿ ಅಣ್ಣೆಕಲ್ಲಾಟ ಮಕ್ಕಳಿಗೆ ಅನುಕೂಲಕರವಾದದ್ದಾಗಿದೆ. ಅಣ್ಣೆಕಲ್ಲಿನ ಆಟದಲ್ಲಿ ಎಣಿಕೆಯ ಹಾಡು ರೂಢಿಯಲ್ಲಿದೆ.

ಒಂದು ಸೀಬ್ ಸೀಬಿ
ಎರಡು ಗರಡಾಳ
ಮೂರು ಮುತ್ತಪ್ಪ
ನಾಲ್ಕು ನಾಗೇಂದ್ರ
ಐದು ಪಂಚಾಂಗ
ಆರು ದಾಳಿಂಬಿ
ಏಳು ಕೋಟಿಂಬಿ
ಎಂಟರಾಯ ಗಂಟೆ
ಗೊಮ್ಮಣ್ಣ ಗೋಲಿ
ತುಂಬ್ಕತ್ ನಿನ್ ತಾಲಿ.

ಮಕ್ಕಳಿಗೆ ಲೆಕ್ಕ ಕಲಿಸುವ ದೃಷ್ಟಿಯಿಂದಾಗಿ ದೊಡ್ಡವರು ಈ

ಶಿಶುಪ್ರಾಸವನ್ನು ಸೃಷ್ಟಿಸಿ ಅಣ್ಣೆಕಲ್ಲಿನ ಆಟದೊಂದಿಗೆ ಹೊಂದಿಸಿರುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಕಂಡು ಬರುವ ಅಣ್ಣೆಕಲ್ಲಾಟದೊಂದಿಗಿನ ಶಿಶುಪ್ರಾಸವಿದು.

ಅಣ್ಣೆಕಲ್ಲಾಟ ಆಡಲು ಯಾರೂ ಜತೆ ಸಿಗದಿದ್ದಾಗ ಒಬ್ಬರೇ ಆಡುವುದುಂಟು. ಒಂದೇ ಕಲ್ಲನ್ನು ಬಳಸಿಕೊಂಡು ಅದನ್ನು ಮೇಲೆ ಹಾರಿಸಿ ಕೆಳಕ್ಕೆ ಬೀಳದಂತೆ ಹಿಡಿಯುತ್ತಾ ಅಪ್ಪೇ ಒಂದು, ಆಲ ಎರಡು, ಕೋಲ ಮೂರು, ಕುಣಕೆ ನಾಲ್ಕು, ಪಟ್ಟಂಶೆಟ್ಟಿ, ಪಾರತವ್ವ, ನಿಂಬವ್ವ, ನೀಲವ್ವ ಗೊಳ್ಳು ಕೊಟರ್ ಎಂದು ರಾಗವಾಗಿ ಹಾಡುತ್ತಾ ಆಡುತ್ತಾರೆ.

ಉತ್ತರ ಕರ್ನಾಟಕದಲ್ಲಿ ಗಜಗದಾಟ ಎಂದು ಕರೆಯುತ್ತಾರೆ. ಇಲ್ಲಿ ಮೂರು, ಐದು, ಏಳು ಹಾಗೂ ಒಂಬತ್ತು ಗಜಗಗಳು ಇಲ್ಲವೆ ಕಲ್ಲಿನ ಹರಳುಗಳನ್ನು ಬಳಸುತ್ತಾರೆ. ಮೂರು ಹರಳಿನ ಆಟಕ್ಕೆ ತಂದಾಣಿದಿಲ್ಲ, ಐದು ಹರಳಿನ ಆಟಕ್ಕೆ ಐದು ಸೈದು, ಏಳು ಹರಳಿನ ಆಟಕ್ಕೆ ಏಳು ಚೇಳು, ಒಂಬತ್ತು ಹರಳಿನ ಆಟಕ್ಕೆ 'ಒಂಬತ್ತು ಶಂಬತ್ತ' ಎಂದು ಕರೆಯುತ್ತಾರೆ. ಗಜಗದಾಟದಲ್ಲಿ ವೈವಿಧ್ಯಮಯ ಪದಗಳಿವೆ.

1.4.4 **ಅಳೀರ್ ಗುಡುಗುಡು** : ಗಂಡುಮಕ್ಕಳು ಆಡುವ ಹೊರಾಂಗಣ ಆಟ. ಕಬಡ್ಡಿಯ ಆದಿಮರೂಪ. ಎರಡು ಗುಂಪುಗಳು. ಎರಡರಲ್ಲೂ ಸಮ ಸಂಖ್ಯೆಯ ಆಟಗಾರರು ಒಂದೊಂದು ಗುಂಪಿಗೂ ಒಬ್ಬೊಬ್ಬ ನಾಯಕ, ಎರಡು ಗುಂಪಿನವರು ಪರಸ್ಪರ ಎದುರು ಬದುರು ನಿಂತು ಈರ್ವರ ನಡುವೆ ನೆಲದ ಮೇಲೆ ಒಂದು ಗೆರೆ ಎಳೆದುಕೊಳ್ಳುತ್ತಾರೆ. ಅದು ಆಟದ ನಿರ್ಣಾಯಕ ಗಡಿರೇಖೆ. ನಾಣ್ಯವನ್ನು ಮೇಲೆ ಎಸೆದು ಯಾರು ಮೊದಲು ಆಟ ಪ್ರಾರಂಭಿಸಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಟಾಸ್ ಗೆದ್ದವರು ಮೊದಲು ಅಳೀರ್ ಗುಡುಗುಡು ಎನ್ನುತ್ತಾ ನಿರ್ಣಾಯಕ

ರೇಖೆ ದಾಟಿ ಎದುರು ಗುಂಪಿನತ್ತ ಧಾವಿಸುತ್ತಾರೆ. ಎದುರು ಗುಂಪಿನ ಯಾರನ್ನಾದರೂ ಮುಟ್ಟಿ ಅವರಿಂದ ತಪ್ಪಿಸಿಕೊಂಡು ಗುಡುಗುಡು ಎನ್ನುವುದನ್ನು ನಿಲ್ಲಿಸದೆ ಗೆರೆ ದಾಟಿದರೆ ಮುಟ್ಟಿಸಿಕೊಂಡವರು ಸೋತಂತೆ. ಅಳೀರ್ ಗುಡುಗುಡು ಎಂದು ಹೋದವನನ್ನು ಎದುರು ಗುಂಪಿನವರು ಹಿಡಿದು ಅವನು ಗೆರೆ ದಾಟದೆ ಗುಡುಗುಡು ಎಂದು ಹೇಳುವುದನ್ನು ನಿಲ್ಲಿಸಿದರೆ ಅವನು ಸೋತಂತೆ. ಸೋತವರು ಗುಂಪನ್ನು ಬಿಟ್ಟು ಹೊರಗೆ ಕೂರಬೇಕು. ಪ್ರತಿ ಸಾರಿಯೂ ಒಂದು ಗುಂಪಿನಿಂದ ಒಬ್ಬರು ಮಾತ್ರ ಅಳೀರ್ ಗುಡುಗುಡು ಎನ್ನುತ್ತಾ ಎದುರಾಳಿ ಗುಂಪಿನೊಳಗೆ ಪ್ರವೇಶಿಸಬೇಕು. ಒಂದು ಗುಂಪಿನಲ್ಲಿರುವವರೆಲ್ಲ, ಮುಟ್ಟಿಸಿಕೊಂಡೊ ಇಲ್ಲವೆ ಗಡಿರೇಖೆ ಮುಟ್ಟಲಾಗದೆ ಗುಡುಗುಡು ಎನ್ನಲಾಗದೆ ಒಟ್ಟಾರೆ ಅವರೆಲ್ಲರೂ ಸೋತವರಾಗುತ್ತಾರೆ. ಗೆದ್ದವರಿಗೆ ಒಂದು ಆಟ ಗೆದ್ದಂತೆ. ಆಟಕ್ಕೆ ಮೊದಲೇ ಇಷ್ಟು ಆಟಗಳು ಎಂದು ಪರಸ್ಪರರ ಒಪ್ಪಿಗೆಯ ಮೇಲೆ ನಿಷ್ಕರ್ಷೆಯಾಗುತ್ತದೆ. ಹೆಚ್ಚಿನ ಆಟಗಳನ್ನು ಆಡಿದ ಗುಂಪು ಗೆದ್ದಂತೆ.

ಬಯಲು ಸೀಮೆ ಮತ್ತು ಕರ್ನಾಟಕದ ಉತ್ತರಭಾಗದಲ್ಲಿ ಕಂಡುಬರುವ ಆಟವಿದು. ಬಯಲು ಸೀಮೆಯಲ್ಲಿ ಕಬಡ್ಡಿ ಎಂದು ಕರೆದರೆ, ಉತ್ತರ ಕರ್ನಾಟಕದಲ್ಲಿ ಈ ಆಟಕ್ಕೆ ತೀತೀ(ತೂತು) ಅಥವಾ ಹುತುತು ಎಂದು ಕರೆಯುತ್ತಾರೆ.

1.4.5 **ಆನೆಆಟ** : ಉತ್ತರ ಕರ್ನಾಟಕದಲ್ಲಿ ರೂಢಿಯಲ್ಲಿರುವ ಆಟ. ಪುಟ್ಟ ಮಕ್ಕಳು ಅಳುವಾಗ ಇಲ್ಲವೆ ಚಂಡಿಹಿಡಿದಾಗ ಮಕ್ಕಳನ್ನು ರಮಿಸಲೆಂದು ದೊಡ್ಡವರು ಅಂಗಾತ ಮಲಗಿ ಮಗುವನ್ನು ತಮ್ಮ ಎರಡೂ ಮೊಣಕಾಲುಗಳ ಮೇಲೆ ಮಲಗಿಸಿಕೊಂಡು ಮೇಲಕ್ಕೆ ಕೆಳಕ್ಕೆ ತೂಗಾಡಿಸುತ್ತಾ ಆನೆ ಆಟವನ್ನು ಆಡಿಸುತ್ತಾರೆ. ಈ ರೀತಿ ತೂಗಾಡಿಸುವಾಗ ಆನೆ ಹಾಡು ಹೇಳುತ್ತಾರೆ.

ಆನಿ ಬಂತು ಆನಿ ! ಇದ್ಯಾ ಊರ ಆನಿ ?
ಇಜಾಪುರದ ಆನಿ; ಇಲ್ಲಿಗ್ಯಾಕ ಬಂತು ?
ಹಾದಿ ತಪ್ಪಿ ಬಂತು : ಹಾದಿಗೊಂದು ದುಡ್ಡು
ಬೀದಿಗೊಂದು ದುಡ್ಡು : ಅದ ದುಡ್ಡು ಕೊಟ್ಟು
ಕೊಬರಿ ಬೆಲ್ಲ ತಂದು : ಲಟ ಲಟ ಮುರಿದು
ಬೀದಿಗೊಂದು ಬೆಲ್ಲ : ಲಟಲಟ ಮುರಿದು
ಯವನರ ಕೈಯಾಗ ಕೊಟ್ಟು;
ಚಕ್ರಬಾಯಿನ ದುಂಡು
ಕೆಳಗೆ ಬಿದ್ದರ ತುಂಡು.

ಆನೆ ಹಾಡಿನ ಧಾಟಿಗೆ ಇಲ್ಲವೆ ಜೋಕಾಲಿಯಂತೆ ಮೊಣಕಾಲುಗಳ ಮೇಲೆ ತೂಗುವುದರಿಂದ ಅಳುವ ಮಗು ಸುಮ್ಮನಾಗುತ್ತದೆ. ಈ ಹಾಡು ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತವಾದುದಾದರೂ ಜನಪದ ಆಟ ಮತ್ತು ಆಟ ಸಂಬಂಧಿ ಹಾಡುಗಳು ನಾಡಿನ ಚಾರಿತ್ರಿಕ ಘಟನೆಗಳನ್ನು ಪರಿಚಯಿಸುತ್ತವೆ ಎನ್ನುವುದಕ್ಕೆ ಆನೆ ಆಟ ಅತ್ಯುತ್ತಮವಾದ ನಿದರ್ಶನವಾಗಿದೆ. ಆನೆ ಆಟದ ಹಾಡಿನೊಳಗಿನ ದುರಂತ ಸತ್ಯವನ್ನು ಕುರಿತು ಡಾ.ಬಿ.ಎಸ್.ಗದಗೀಮಠ ಅವರು ಹೀಗೆ ವಿವರಿಸುತ್ತಾರೆ: "ಯವನರು ಹಿಂದೂಸ್ಥಾನದ ಮೇಲೆ ದಂಡೆತ್ತಿ ಬಂದು, ಗೆದ್ದು ಆಕ್ರಮಣ ಮಾಡಿದ ಮೇಲೆ, ರಾಜ್ಯದಲ್ಲಿ ಒತ್ತಾಯದಿಂದ ತಮ್ಮ ಧರ್ಮವನ್ನು ಹಬ್ಬಿಸುತ್ತಾ ಬಂದಿದ್ದಾರೆ. ಧರ್ಮವನ್ನು ಹಬ್ಬಿಸಲು ಅವರು ಕೈಗೊಂಡ ಅನೇಕ ಕ್ರೂರ ಕೃತಿಗಳು ಇತಿಹಾಸದಿಂದ ತಿಳಿದುಬರುವುದು. ಇಂತಹ ಕೃತಿಗಳಲ್ಲಿ ಅನ್ಯಧರ್ಮಗಳ ಚಿಕ್ಕಮಕ್ಕಳ ಚೆಂಡನ್ನು (ಚಂಡು–ತಲೆ) ಮುರಿಸಿ ಹಾಕುವುದು ಒಂದಾಗಿತ್ತೆಂದು ಕಂಡುಬರುತ್ತದೆ. ಇದರ ನಿದರ್ಶನಕ್ಕಾಗಿ ಮಕ್ಕಳ ಚಂಡು ಮುರಿಸಿ ಹಾಕಿದ ಹಳೆ ಬಾವಿಗಳೂ ಅಲ್ಲಲ್ಲಿ ಈಗಲೂ

ಇವೆ. ಇಂತಹ ಕೃತಿಯನ್ನು ಜನಪದವು ಮರೆಯುವ ಬಗೆ ಹೇಗೆ ? ದಕ್ಷಿಣ ಹಿಂದೂಸ್ಥಾನದಲ್ಲಿ ಮುಸಲ್ಮಾನರ ರಾಜ್ಯ ಸ್ಥಾಪಿಸಿದ ಪಂಚ ಬಾದಶಾಹಗಳಲ್ಲಿ ಬಿಜಾಪುರದ ಅಲೀ ಅದಿಲಶಹನು ಆಕಾರದಲ್ಲಿ ನೋಡಲು ಆನೆಯಂತೆ ಭೀಕರನೂ ಕೃತಿಗಳಲ್ಲಿ ಹುಲಿಯಂತೆ ಕ್ರೂರನೂ ರೌದ್ರ ಧರ್ಮಾಭಿಮಾನಿಯೂ, ಕಪಟಿಯೂ ಇದ್ದನೆಂದು ಇತಿಹಾಸವು ಹೇಳುವುದು. ಮದವೇರಿ ಹೊರಟಿದ್ದ ಆನೆಗೆ ಜನರು ಸಹಜ ಅಂಜುವಂತೆ ಇವನ ರಾಜ್ಯಾಡಳಿತೆಯ ಚಕ್ರದಲ್ಲಿ ಸಿಕ್ಕಿ ಜನರು ನಡುಗುತ್ತಿದ್ದರು. ಒಮ್ಮೆ ರಾಜ್ಯದ ಹಳ್ಳಿಗಳನ್ನು ಇವನು ಹೊಕ್ಕರೆ ಇವನ ಪರಿವಾರದವರು ಯಾವ ಕೃತಿಗಳನ್ನೂ ಮಾಡಲು ಹೇಸುತ್ತಿದ್ದಿಲ್ಲ. ಕಾರಣ ಜನರು ಅಂಜಿ ತಮ್ಮ ಮಕ್ಕಳನ್ನು, ಹೆಂಗಸರನ್ನು ಮನೆಯಲ್ಲಿಯೇ ಬಚ್ಚಿಡುತ್ತಿದ್ದರು. ಅವರು ಹಾದಿಯ ಮೇಲೆ ಬಂದರೆ ಹಾದಿಯ ಮೇಲೂ ಬೀದಿಯಲ್ಲಿ ಬಂದರೆ ಬೀದಿಯಲ್ಲಿಯೂ ಉಡಿಯಲ್ಲಿ ದುಡ್ಡು ಕಟ್ಟಿಕೊಂಡು ಜನರು ಹಿಂದಿರುಗಲು ಬಿಡುತ್ತಿದ್ದರಂತೆ ; ಅಲ್ಲದೆ ಬೆಲ್ಲ ಕೊಬ್ಬರಿ ತಿನ್ನಲು ಕೊಟ್ಟು ಸಮಾಧಾನ ಮಾಡುತ್ತಿದ್ದರಂತೆ. ಈ ಸಂಗತಿಗಳನ್ನು ಈಗಲೂ ನಾವು ನಮ್ಮ ಮುತ್ತಜ್ಜರಿಂದ ಕೇಳಬಹುದು. ಹೀಗಾಗಿ ವಿಜಾಪುರದ ಆನೆಯ ಬೆದರಿಕೆಯ ಮುಂದೆ ಮಕ್ಕಳನ್ನಾಡಿಸಲು ಆನೆಯ ಆಟವಾಗಿ ಇಂದು ನಮ್ಮ ಜನಪದದಲ್ಲಿ ಬಂದಿದೆ ಎಂದು ಹೇಳಬಹುದು."

1.4.6 **ಉಪ್ಪುಪ್ಪು ಕಡ್ಡಿ** : ಗಂಡುಮಕ್ಕಳು –ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಕೆಲವೊಮ್ಮೆ ಇಬ್ಬರೂ ಸೇರಿ ಆಡುವ ಆಟವಿದು. ಮರಳಿನ ರಾಶಿ ಇರುವಂತಹ ಹೊಳೆ ದಡ, ನದಿ ಬಯಲು, ಕೆರೆ ದಂಡೆಗಳಲ್ಲಿ ಹೆಚ್ಚಾಗಿ ರೂಢಿಯಲ್ಲಿರುವ ಹೊರಾಂಗಣ ಆಟ. ಇಬ್ಬರು ಆಟಗಾರರು ಎದುರುಬದುರಾಗಿ ಕುಳಿತು ಮರಳಿನಲ್ಲಿ ಒಂದು ಮೊಳದುದ್ದದ ಗುಪ್ಪೆ ಕಟ್ಟುತ್ತಾರೆ. ಆಟ ಆಡುವವರು ಬಲಗೈಯಲ್ಲಿ ಬೆರಳುದ್ದದ ಕಡ್ಡಿಯೊಂದನ್ನು

ಹಿಡಿದು ಆ ಗುಪ್ಪೆಯೊಳಗೆ ಹೊರಗೆ ಕಾಣದಂತೆ ಬಚ್ಚಿಡುತ್ತಾರೆ. ಅನಂತರ ಮರಳಿನ ಮೇಲುಭಾಗವನ್ನು ಚೆನ್ನಾಗಿ ಸವರಿ ಸಮಮಾಡುತ್ತಾರೆ. ತಮ್ಮ ಎರಡೂ ಕೈಗಳ ಬೆರಳುಗಳನ್ನು ಹೆಣೆದುಕೊಂಡು ಹಸ್ತದ ಕೆಳಭಾಗದಿಂದ ಮರಳ ಒಂದು ಭಾಗವನ್ನು ಮುಚ್ಚುತ್ತಾರೆ. ಎದುರಾಳಿ ಆಟಗಾರರು ಅವಿತಿರಿಸಿದ ಕಡ್ಡಿಯನ್ನು ಆ ಮರಳ ಗುಪ್ಪೆಯಿಂದ ಹುಡುಕಿ ಹೊರತೆಗೆಯಬೇಕು. ಅಡಗಿಸಿರುವ ಕಡ್ಡಿಯು ಹಸ್ತಗಳು ಮುಚ್ಚಿರುವ ಭಾಗದಲ್ಲಿದ್ದರೆ ಅವರು ಗೆದ್ದಂತೆ. ಕಡ್ಡಿ ಅಲ್ಲಿರದಿದ್ದರೆ, ಕಡ್ಡಿ ಅಡಗಿಸಿಟ್ಟವರು ಮರಳಗುಪ್ಪೆಯಿಂದ ಅದನ್ನು ಹೊರತೆಗೆದು, ಸೋತವರ ಕೈಗಳ ಬೊಗಸೆ ತುಂಬಾ ಮರಳು ತುಂಬಿ, ಅದರ ಮಧ್ಯಭಾಗಕ್ಕೆ ಎಂಜಲು ಉಗಿದು, ಅಲ್ಲಿ ಕಡ್ಡಿಯನ್ನು ನೆಟ್ಟಗೆ ನಿಲ್ಲಿಸಿ, ಅವರ ಕಣ್ಣುಗಳನ್ನು ತಮ್ಮ ಎರಡೂ ಕೈಗಳಿಂದ ಬಿಗಿಯಾಗಿ ಮುಚ್ಚಿ, ಅಲ್ಲಿ-ಇಲ್ಲಿ ತಿರುಗಾಡಿಸಿ ಎಲ್ಲೋ ಒಂದು ಕಡೆ ಬೊಗಸೆಯಲ್ಲಿದ್ದ ಮರಳನ್ನು ಸುರಿಯಲು ಹೇಳುತ್ತಾರೆ. ಅವರನ್ನು ಮತ್ತೆ ಅಲ್ಲಿಂದಿಲ್ಲಿ ಸುತ್ತಾಡಿಸಿ ಮೊದಲಿನ ಜಾಗಕ್ಕೆ ಕರೆತಂದು ಕಣ್ಣು ಮುಚ್ಚಿದ ಕೈಗಳನ್ನು ಬಿಟ್ಟು, ಕಡ್ಡಿ ಹುಡುಕಿ ತರಲು ಸೂಚಿಸುತ್ತಾರೆ. ಸೋತವನು ತಾನು ಮರಳು ಸುರಿದ ಸ್ಥಳವನ್ನು ಪತ್ತೆ ಹಚ್ಚಿ ಕಡ್ಡಿ ಹುಡುಕಿ ತಂದರೆ ಮತ್ತೆ ಮೊದಲಿನಿಂದ ಆಟ ಆರಂಭ. ಇಲ್ಲವಾದರೆ, ಮೊದಲೇ ನಿಗದಿಪಡಿಸಿದಂತೆ ಸೋತವನು ಗೆದ್ದವನ ಕೈಗಳಿಂದ ಅಷ್ಟೂ ಬಾರಿ ಕಣ್ಣು ಮುಚ್ಚಿಸಿಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಗ್ರಾಮಾಂತರ ಪ್ರದೇಶಗಳಲ್ಲಿ ಉಪ್ಪುಪ್ಪುಕಡ್ಡಿ ಆಟ ಆಡುವ ಸಂದರ್ಭದಲ್ಲಿ ;

ಉಪ್ಪುಪ್ಪು ಕಡ್ಡಿ
ಉಪ್ನೇರಳೆ ಕಡ್ಡಿ
ಯಾವೂರ್ಲೆ ಬಡ್ಡಿ
ಕೆರೆ ಮ್ಯಾಗಳ ದೊಡ್ಡಿ

ಎಂದು ತಮಾಶೆ ಪದ ಹೇಳುವುದುಂಟು.

1.4.7 **ಉಪ್ಪೇರುಪ್ಪ ಆಟ** : ಹೆಣ್ಣುಮಕ್ಕಳ ಆಟ. ಐದಾರು ಜನ ಮಕ್ಕಳು ಸೇರಿಕೊಂಡು ಮನೆಯ ಒಳಗಿನ ಮೂಲೆಗಳನ್ನು ಇಲ್ಲವೆ ಕಂಬಗಳನ್ನು ಬಳಸಿಕೊಂಡು ಉಪ್ಪೇರುಪ್ಪ ಆಡುತ್ತಾರೆ. ಮೊದಲು ಉಪ್ಪು ಬೇಡುವವರನ್ನು ನಿರ್ಧರಿಸಲು ಎಲ್ಲರೂ ಒಟ್ಟಿಗೆ ಸೇರಿ ವೃತ್ತಾಕಾರವಾಗಿ ನಿಂತುಕೊಂಡು ಎಣಿಕೆಯ ಮೂಲಕ ನಿರ್ಣಯಿಸುತ್ತಾರೆ. ಚಕ್ಲೀ, ಮಕ್ಲೀ, ಪಾಕ, ಕೂಕ, ಪರಂಗ್, ಲಾಟ್‌ಲೂಟ್ ಚಲ್ ಎಂದು ಎಣಿಕೆ ಮಾಡುವಾಗ ಚಲ್ ಎಂದು ನಿಲ್ಲಿಸಿದಾಗ ಅದು ಯಾರನ್ನು ನಿರ್ದೇಶಿಸುತ್ತದೆಯೋ ಅವರು ಗೆದ್ದಂತೆ. ಹೀಗೆ ಎಲ್ಲರೂ ಗೆದ್ದು ಕೊನೆಯಲ್ಲಿ ಉಳಿಯುವವಳು ಉಪ್ಪು ಬೇಡಲು ಹೋಗಬೇಕು. ಗೆದ್ದವರೆಲ್ಲರೂ ಒಂದೊಂದು ಮೂಲೆಯನ್ನೋ ಅಥವಾ ಕಂಬವನ್ನೋ ಆಶ್ರಯಿಸಿ ನಿಲ್ಲುತ್ತಾರೆ. ಸೋತವಳು ಗೆದ್ದ ಪ್ರತಿಯೊಬ್ಬರ ಬಳಿಯೂ 'ಉಪ್ಪುಕೊಡಿ' ಎಂದು ಬೇಡುತ್ತಾ ಬರುತ್ತಾಳೆ. ಅವರು ಇಲ್ಲ ಮುಂದಿನ ಮನೆಗೆ ಹೋಗು ಎಂದು ಕಳುಹಿಸುತ್ತಾರೆ. ಉಪ್ಪು ಬೇಡಲು ಬರುವವಳು ಒಂದು ಕಂಬದಿಂದ ಇನ್ನೊಂದು ಕಂಬದ ಬಳಿಗೆ ಬರುವಷ್ಟರಲ್ಲಿ ಗೆದ್ದವರು ಕಂಬಗಳನ್ನು ಬದಲಾಯಿಸುತ್ತಾ ಅಂದರೆ ಸ್ಥಳ ಬದಲಾಯಿಸುತ್ತಿರುತ್ತಾರೆ. ಹೀಗೆ ಸ್ಥಳ ಬದಲಾವಣೆ ಸಂದರ್ಭದಲ್ಲಿ ಉಪ್ಪು ಬೇಡುವವಳು ಖಾಲಿಯಾದ ಸ್ಥಳವನ್ನು ಆಕ್ರಮಿಸಿದರೆ, ಆ ಸ್ಥಳಕ್ಕೆ ಬರಬೇಕಾದವಳು ಉಪ್ಪು ಬೇಡಲು ಹೋಗಬೇಕಾಗುತ್ತದೆ. ಹೀಗೆ ಎಲ್ಲರ ಸರದಿಯು ಬರುವವರೆಗೂ ಉಪ್ಪೇರುಪ್ಪ ಆಟವು ನಡೆಯುತ್ತಿರುತ್ತದೆ. ಮಕ್ಕಳಲ್ಲಿ ತ್ವರಿತ ಚಲನೆಯ ಗತಿಯನ್ನು ರೂಢಿಸುವ ಸಲುವಾಗಿ ಹುಟ್ಟಿಕೊಂಡಿರುವ ಈ ಆಟವು ಶಿವಮೊಗ್ಗ, ಚಿಕ್ಕಮಗಳೂರು ಭಾಗಗಳಲ್ಲಿ ಕಂಡು ಬರುತ್ತದೆ.

1.4.8 **ಬಳೆಚೂರಿನ ಆಟ** : ಸಾಮಾನ್ಯವಾಗಿ ಇಬ್ಬರು ಹೆಣ್ಣುಮಕ್ಕಳು ಕೂಡಿ ಆಡುವ ಒಳಾಂಗಣ ಆಟ. ಒಡೆದ ಬಳೆಗಳ ಚೂರುಗಳನ್ನು

ಸಂಗ್ರಹಿಸಿ ಇಬ್ಬರೂ ಸಮನಾಗಿ ಹಂಚಿಕೊಂಡು, ಆಟಕ್ಕೆ ಇಂತಿಷ್ಟು ಎಂದು ನಿಗದಿಪಡಿಸಿಕೊಂಡು ಆಡುತ್ತಾರೆ. ಆಟದಲ್ಲಿ ಬಳಸುವ ಬಳೆಚೂರುಗಳನ್ನು ಒಟ್ಟುಗೂಡಿಸಿ ನೆಲದ ಮೇಲಿಟ್ಟು ಬಾಯಿಂದ ಜೋರಾಗಿ ಗಾಳಿ ಊದಿದಾಗ ಆ ಬಳೆಚೂರುಗಳು ಎಲ್ಲೆಡೆ ಚದುರುತ್ತವೆ. ಹೀಗೆ ಚದುರಿದ ಬಳೆ ಚೂರುಗಳನ್ನು ಒಂದು ಮತ್ತೊಂದಕ್ಕೆ ತಗುಲದಂತೆ ಆಯ್ದುಕೊಳ್ಳಬೇಕು. ಅಕಸ್ಮಾತ್ ತಗುಲಿದ ಪಕ್ಷದಲ್ಲಿ ಅವರು ಸೋತಂತೆ, ಮುಂದಿನವರು ಆಡುವರು. ಹೀಗೆ ಕೊನೆಯವರೆಗೂ ಆಡುವಾಗ ಯಾರು ಹೆಚ್ಚು ಬಳೆಯ ಚೂರುಗಳನ್ನು ಗೆಲ್ಲುತ್ತಾರೊ ಅವರೇ ಜಯಶಾಲಿಗಳು.

1.4.9 **ಕಂಬ ಆಟ** : ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಗಂಡುಮಕ್ಕಳು ಆಡುವ ಹೊರಾಂಗಣ ಆಟ. ಈ ಆಟದಲ್ಲಿ ಎಷ್ಟು ಜನ ಬೇಕಾದರೂ ಪಾಲ್ಗೊಳ್ಳಬಹುದು. ಆದರೆ ಅವರ ಬಳಿ ಚೂಪು ತುದಿಯುಳ್ಳ ತುಸು ಉದ್ದನೆಯ ಕಬ್ಬಿಣದ ಕಂಬಿ ಇರಬೇಕು, ಅಷ್ಟೆ. ಚನ್ನಾಗಿ ನೆನೆದ ಆದರೆ ಕೆಸರಾಗದಂತಹ ತೇವವುಳ್ಳ ಸ್ಥಳವೇ ಈ ಆಟಕ್ಕೆ ಕ್ರೀಡಾಂಗಣ. ಇಂತಹ ಸ್ಥಳದಲ್ಲಿ ಒಂದು ವೃತ್ತವನ್ನು ಬರೆದು, ಆಟದಲ್ಲಿ ಪಾಲ್ಗೊಳ್ಳುವ ಆಟಗಾರರೆಲ್ಲರೂ ತಮ್ಮ ಬಳಿ ಇರುವ ಕಬ್ಬಿಣದ ಕಂಬಿಯನ್ನು ವೃತ್ತದ ಒಳಗಿನ ನೆಲಕ್ಕೆ ಎಸೆದು ಕಚ್ಚಿಸಬೇಕು. ಕಂಬಿ ಎಸೆದಾಗ ಅದು ನೆಲಕ್ಕೆ ಕಚ್ಚಿಕೊಳ್ಳದಿದ್ದಲ್ಲಿ ಆ ಕಂಬಿಯವನು ಕಳ್ಳನಾಗಬೇಕು. ಆಮೇಲೆ ಉಳಿದ ಗೆದ್ದ ಆಟಗಾರರು ಒಬ್ಬೊಬ್ಬರಾಗಿ ಕಂಬಿಯನ್ನು ನೆಲಕ್ಕೆ ಕಚ್ಚಿಸುತ್ತಾ ಮುಂದೆ ಮುಂದೆ ಸಾಗುವರು. ಕಂಬಿ ಕಚ್ಚಿಸುತ್ತಾ ಹೋಗುವಾಗ ಎಲ್ಲಿ ಕಂಬಿ ನೆಲಕ್ಕೆ ಕಚ್ಚಿಕೊಳ್ಳುವುದಿಲ್ಲವೋ ಆಗ ಆ ಕಂಬಿ ಎಸೆದವನ ಆಟ ಹೋಗಿ ಮತ್ತೊಬ್ಬನು ಅಲ್ಲಿಂದ ಮುಂದಕ್ಕೆ ಅದೇ ರೀತಿಯಲ್ಲಿ, ಕಂಬಿ ಕಚ್ಚಿಸುತ್ತಾ ಮುಂದುವರಿಯುತ್ತಾನೆ. ಇದೇ ರೀತಿ ಗೆದ್ದವರೆಲ್ಲರೂ ನೆಲ್ಕಕೆ ಕಂಬಿ ಕಚ್ಚಿಸುವುದು ಮುಗಿದ ಮೇಲೆ, ಕಂಬಿ ಕಚ್ಚಿಸುವುದು ಎಲ್ಲಿಗೆ

ನಿಂತಿರುತ್ತದೆಯೋ ಅಲ್ಲಿಂದ ಹಿಡಿದು ಕಂಬಿ ಕಚ್ಚಿಸುವುದನ್ನು ಪ್ರಾರಂಭಿಸಿದ ವೃತ್ತದವರೆಗೂ ಕಳ್ಳನಾದವನು ಕುಂಟಿಕೊಂಡು ಬರಬೇಕು. ಅಲ್ಲಿಗೆ ಆಟ ಮುಕ್ತಾಯ, ಮತ್ತೆ ಮೊದಲಿನಂತೆ ಆಟ ಆರಂಭ.

1.4.10 **ಕಲ್ಲೂಪರಾಣಿ ಆಟ** : ಕಲ್ಲೂಪರಾಣಿ ಆಟವು ನಿರ್ದಿಷ್ಟವಾಗಿ ಗಂಡುಮಕ್ಕಳ ಹೊರಾಂಗಣ ಆಟ. ಬಯಲು ಸೀಮೆಯಲ್ಲಿ ಕಂಡುಬರುವಂಥದ್ದು. ಈ ಆಟದಲ್ಲಿ ಹುಡುಗರು ಎರಡು ಅಥವಾ ಮೂರು ಅಡಿ ಉದ್ದದ ಕೋಲುಗಳನ್ನು ಬಳಸುತ್ತಾರೆ. ಮೊದಲು 'ಕಳ್ಳ'ನಾಗುವವನನ್ನು ಸಂಖ್ಯಾ ಎಣಿಕೆಯ ಮೇಲೆ ನಿರ್ಧರಿಸುತ್ತಾರೆ. ಅವನು ತನ್ನ ಕೋಲನ್ನು ಎರಡು ಕೈಗಳ ಮೇಲೂ ಅಡ್ಡಲಾಗಿರಿಸಿ ಎತ್ತಿ ಹಿಡಿಯುತ್ತಾನೆ. ಹಿಂದಿನಿಂದ ಯಾರಾದರೊಬ್ಬರು ತಮ್ಮ ಕೋಲಿನಿಂದ ಆ ಕೋಲನ್ನು ಬಲವಾಗಿ ಹಾರಿಸುತ್ತಾರೆ. ಅದು ದೂರದಲ್ಲೆಲ್ಲೋ ಹೋಗಿ ಬೀಳುತ್ತದೆ. ಆಟಗಾರರಲ್ಲಿ ಮತ್ತೊಬ್ಬ ದೂರದಲ್ಲಿ ಬಿದ್ದ ಕೋಲನ್ನು ಕಳ್ಳನ ಕೈಗೆ ಸಿಗದಂತೆ ಇನ್ನಷ್ಟು ದೂರ ಹಾರಿಸುತ್ತಾನೆ. ಕಳ್ಳನು ಕೋಲು ಹಿಡಿಯಲು ಬಂದಾಗ ಉಳಿದ ಆಟಗಾರರೆಲ್ಲರೂ ತಮ್ಮ ಕೋಲುಗಳನ್ನು ಕಲ್ಲಿನ ಮೇಲಿರಿಸಿಕೊಂಡಿರಬೇಕು. ಇದಕ್ಕೆ ತಪ್ಪಿ ನೆಲದ ಮೇಲೇನಾದರೂ ತಮ್ಮ ಕೋಲಿರಿಸಿದ್ದು ಕಳ್ಳನ ಕೈಗೆ ಸಿಕ್ಕಿ ಬಿದ್ದರೆ ಅವನು ಕಳ್ಳನಾಗಬೇಕು. ಇಲ್ಲವೆ ಎಷ್ಟು ದೂರ ಕೋಲನ್ನು ಹಾರಿಸಿಕೊಂಡು ಹೋಗಿರುತ್ತಾರೋ ಅಷ್ಟು ದೂರದಿಂದ ಮೊದಲಿನ ಆಟ ಆರಂಭವಾದ ಸ್ಥಳದವರೆಗೂ ಕುಂಟಿಕೊಂಡು ಬರಬೇಕು.

1.4.11 **ಚೆಂಡಾಟ** : ಗಂಡುಮಕ್ಕಳ ಹೊರಾಂಗಣ ಆಟ. ಚೆಂಡಾಟದಲ್ಲಿ ಲಗ್ಗೆ ಚೆಂಡು, ಜೋಡಿ ಚೆಂಡು, ಗಾರು ಚೆಂಡು, ಸೂರು ಚೆಂಡು, ರಾಮ ಚೆಂಡು, ಲಗೋರಿ, ಕುದುರೆ ಚೆಂಡು, ಬೂರ್ ಬೂರ್ ಚೆಂಡು, ಟಾಂಗ್ ಬಿರಾಂಗ್, ಹರಚೆಂಡು (ಧಪ್ಪಾಧುಪ್ಪಿ) ಮುಂತಾದ ಬಗೆಗಳಿವೆ.

ಚೆಂಡಾಟದಲ್ಲಿ ಮಕ್ಕಳು ಮತ್ತು ದೊಡ್ಡವರು ಪ್ರತ್ಯೇಕವಾಗಿ, ಕೆಲವೊಮ್ಮೆ ಇಬ್ಬರೂ ಸೇರಿ ಆಡುವುದುಂಟು. ಚೆಂಡಾಟವಾಡಲು ಸಮತಟ್ಟಾದ ವಿಶಾಲ ಬಯಲು ಒಳ್ಳೆಯದು. ಚೆಂಡಾಟದಲ್ಲಿ ಯಾವಾಗಲೂ ಎರಡು ಪಕ್ಷಗಳಿರುತ್ತವೆ. ಸಮಸಂಖ್ಯೆಯಲ್ಲಿರುತ್ತವೆ. ಟಾಸ್ ಹಾಕಿ ಯಾರು ಮೊದಲು ಆಟ ಆಡಬೇಕೆನ್ನುವುದನ್ನು ನಿರ್ಧರಿಸಲಾಗುತ್ತದೆ ಚೆಂಡನ್ನು ಹೊಡೆಯುವವರು ಮತ್ತು ಚೆಂಡನ್ನು ಕಾಯುವವರು ಹೀಗೆ ಎರಡು ಪಕ್ಷಗಳು.

ಲಗ್ಗೆ ಚೆಂಡಾಟದಲ್ಲಿ, ಮೊದಲಿಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಒಂದು ಸಣ್ಣ ವೃತ್ತ ರಚಿಸುತ್ತಾರೆ. ಆ ವೃತ್ತದೊಳಗೆ ಒಂದು ಮರದ ಕಿರು ಹಲಗೆ ಅಥವಾ ಒಡೆದ ಮಡಿಕೆಯ ಚೂರುಗಳು ಇಲ್ಲವೆ ಕಲ್ಲಿನ ಹಲ್ಲೆಗಳನ್ನು ಒಂದರ ಮೇಲೊಂದರಂತೆ ಪೇರಿಸಿ ಇಡುತ್ತಾರೆ. ಕಾಯುವವರು ಈ ಲಗ್ಗೆಯ ಎಡಬಲ ಬದಿಗಳಲ್ಲಿ ನಿಲ್ಲುತ್ತಾರೆ. ಹೊಡೆಯುವವರು ಸರದಿ ಪ್ರಕಾರ ಒಬ್ಬೊಬ್ಬರಾಗಿ ಬಂದು ನಿರ್ದಿಷ್ಟ ದೂರದಿಂದ ಲಗ್ಗೆಗೆ ಗುರಿ ಇಟ್ಟು ಚೆಂಡನ್ನು ಎಸೆಯುತ್ತಾರೆ. ಒಬ್ಬೊಬ್ಬರಿಗೂ ಮೂರು ಬಾರಿ ಮಾತ್ರ ಅವಕಾಶ. ಈ ಅವಕಾಶದಲ್ಲಿ ಲಗ್ಗೆಯನ್ನು ಉರುಳಿಸಬೇಕು. ಲಗ್ಗೆಯನ್ನು ಉರುಳಿಸದೆ ಪುಟ ನೆಗೆದ ಚೆಂಡನ್ನು ಕಾಯುವವನು ಹಿಡಿದುಕೊಂಡರೆ, ಚೆಂಡುಹೊಡೆಯುವವನ ಅವಕಾಶ ಕೊನೆಯಾಗುತ್ತದೆ. ಹೊಡೆಯುವವರ ಪಕ್ಷದಲ್ಲಿ ಯಾರ ಚೆಂಡೂ ಲಗ್ಗೆಯನ್ನು ಬೀಳಿಸದಿದ್ದರೆ ಅಥವಾ ಪುಟ ನೆಗೆದು ಚೆಂಡು ಹಿಡಿಯಲ್ಪಟ್ಟರೆ ಆಗ ಅವರು ಸೋತಂತೆ. ಒಟ್ಟು ಕ್ರಿಯೆ ಬದಲಾಗಿ ಕಾಯುವವರು ಚೆಂಡು ಹೊಡೆಯುವವರಾಗುತ್ತಾರೆ.

ಚೆಂಡು ಲಗ್ಗೆಗೆ ತಗುಲಿ ಲಗ್ಗೆ ಉರುಳಿ ಬಿದ್ದಾಗ, ಲಗ್ಗೆ ಹೊಡೆದವರು ಚೆಂಡನ್ನು ತಮ್ಮ ಕೈಯಲ್ಲಿ ಹಿಡಿದು ಹರಿತೋ ಹರಿತೋ ಎಂದು ಕೂಗುತ್ತಾ ಚೆಂಡು ಕಾಯುವವರನ್ನು ಬೆನ್ನಟ್ಟಿ ಹೋಗುತ್ತಾರೆ. ಗುರಿ ಇಟ್ಟು ಅವರಿಗೆ ಚೆಂಡಿನಲ್ಲಿ ಹೊಡೆಯುತ್ತಾರೆ. ಲಗ್ಗೆ ಉರುಳಿಸಿದ ಚೆಂಡು, ಹೊಡೆಯುವವರ

ಪಕ್ಷದ ಒಬ್ಬನ ಬಳಿ ಇರುತ್ತದೆ. ಆದರೂ ಹೊಡೆಯುವ ಪಕ್ಷದವರೆಲ್ಲರೂ ತಮ್ಮ ಬಳಿಯೇ ಚೆಂಡಿದೆ ಎನ್ನುವಂತೆ ನಟಿಸುತ್ತಾ ಎದುರಾಳಿಗಳಿಗೆ ಚೆಂಡಿನಿಂದ ಹೊಡೆಯುವವರಂತೆ ಅಭಿನಯಿಸುತ್ತಾ ಅಟ್ಟಾಡಿಸಿಕೊಂಡು ಹೋಗುತ್ತಾರೆ. ಚೆಂಡು ಇರುವವನು ಎಸೆದ ಚೆಂಡು, ಕಾಯುವವರಿಗೆ ತಗುಲಿದಲೆ ಆಟ ಗೆದ್ದಂತೆ. ಇಲ್ಲವಾದರೆ, ಕಾಯುವ ಪಕ್ಷದವರು ಚೆಂಡಿನ ಏಟು ತಗುಲದಂತೆ ಧಾವಿಸಿ ಬಂದು ಲಗ್ಗೆಯನ್ನು ಮುಟ್ಟಿದರೆ ಹೊಡೆಯುವವರು ಸೋತಂತೆ. ಮತ್ತೆ ಆಟ ಮೊದಲಿನಿಂದ ಆರಂಭವಾಗುತ್ತದೆ.

ಜೋಡಿ ಚೆಂಡಾಟವು ಸಹ ಲಗ್ಗೆ ಆಟದಂತೆಯೇ ಇರುತ್ತದೆ. ಇದನ್ನು ಹನಸೋಗೆ ಚೆಂಡು ಎಂದೂ ಕರೆಯುತ್ತಾರೆ. ಜೋಡಿ ಚೆಂಡಾಟದಲ್ಲಿ ಒಂದು ಚೆಂಡಿಗೆ ಬದಲಾಗಿ ಎರಡು ಚೆಂಡುಗಳಿರುತ್ತವೆ.

ಗಾರು ಚೆಂಡಾಟದಲ್ಲಿ, ಮೊದಲೇ ನಿಗದಿಪಡಿಸಿದ ಸ್ಥಳದಲ್ಲಿ ಮೂರ‍್ನಾಲ್ಕು ಅಡಿಗಳ ಅಂತರದಲ್ಲಿ ಎರಡು ದಪ್ಪ ಕಲ್ಲುಗಳನ್ನು ಅವುಗಳ ಮೇಲೆ ಅಡ್ಡಲಾಗಿ ಒಂದು ಕಡ್ಡಿಯನ್ನಿಡುತ್ತಾರೆ. ಚೆಂಡನ್ನು ಕಾಯುವವರು ಸುಮಾರು ಇಪ್ಪತ್ತು ಗಜಗಳ ದೂರದಲ್ಲಿ ನಿಂತು ಚೆಂಡನ್ನು ಕಾಯುತ್ತಾರೆ. ಹೊಡೆಯುವವರು ಕಲ್ಲಿನ ಮೇಲಿರಿಸಿದ ಕಡ್ಡಿಯ ಬಳಿ ನಿಂತುಕೊಂಡು ಎಡಗೈಯಲ್ಲಿ ಚೆಂಡನ್ನು ಹಿಡಿದು ಬಲಗೈಯಲ್ಲಿ ಹಿಡಿದ ಉದ್ದನೆಯ ದಾಂಡಿನಿಂದ ಹೊಡೆಯುತ್ತಾರೆ. ಕಾಯುತ್ತಾ ನಿಂತವರು ಕ್ಯಾಚ್ ಹಿಡಿದರೆ ಹೊಡೆದವನು ಸೋತಂತೆ ಅಥವಾ ಕಾಯುವವನು ಚೆಂಡು ಬಿದ್ದ ಜಾಗದ ವೇಗದಿಂದ ಅದನ್ನು ಗುರಿ ಇಟ್ಟು ಎಸೆದು ಕಲ್ಲುಗಳ ಮೇಲಿರಿಸಿದ ಕಡ್ಡಿ ಉರುಳಿಸಿದರೆ, ಇಲ್ಲವೆ ಕಡ್ಡಿಯ ಅಡಿಯಲ್ಲಿ ಎರಡು ಕಲ್ಲುಗಳ ಮಧ್ಯೆ ನುಸುಳಿ ಹೋದರೂ ಸಹ ಹೊಡೆದವನು ಸೋತಂತೆಯೇ. ನಂತರ ಬೇರೊಬ್ಬನು ಆಟವನ್ನು ಆರಂಭಿಸುತ್ತಾನೆ. (ಎಚ್.ಜೆ.ಲಕ್ಕಪ್ಪ ಗೌಡ :1979)

ಸೂರು ಚೆಂಡಾಟದಲ್ಲಿ ಎದುರಾಳಿಗಳು ಎಂಬುದಿರುವುದಿಲ್ಲ. ಎಲ್ಲರೂ ಗುಂಪಾಗಿ ಕಲೆತು, ಮೊದಲು ಚೆಂಡನ್ನು ಮೇಲಕ್ಕೆ ಹಾರಿಸುತ್ತಾರೆ. ಚೆಂಡು ಯಾರ ಕೈಗೆ ಸಿಗುತ್ತದೆಯೋ ಅವರು ಮತ್ತೊಬ್ಬರಿಗೆ ಬೀಸಿ ಹೊಡೆಯುವುದು. ಸಿಕ್ಕಿದವರಿಗೆ ಸೀರುಂಡೆ ಇದ್ದಂತೆ. ಚೆಂಡಿನ ಏಟು ಬಲವಾಗಿ ಬೀಳುವುದರಿಂದ ಚಿಕ್ಕಮಕ್ಕಳಿಗಿಂತ ದೊಡ್ಡವರೇ ಹೆಚ್ಚಾಗಿ ಆಡುವುದು. ಬಯಲುಸೀಮೆಯಲ್ಲಿ ಪ್ರಚಲಿತದಲ್ಲಿದೆ.

ರಾಮ ಚೆಂಡಾಟದಲ್ಲಿ ಇಬ್ಬರಿಗಿಂತ ಹೆಚ್ಚು ಜನರಿದ್ದು, ಒಂದೇ ನೇರದಲ್ಲಿ ದೂರ ದೂರ ನಿಲ್ಲುತ್ತಾರೆ. ಸೂರು ಚೆಂಡಿನಂತೆ ಇಲ್ಲಿಯೂ ಚೆಂಡು ಸಿಕ್ಕವನು ಮತ್ತೊಬ್ಬರಿಗೆ ಬಾರಿಸುತ್ತಾನೆ. ಹೊಡೆತ ತಿಂದು ಚೆಂಡು ಸಿಕ್ಕದಿರುವ ಸಾಧ್ಯತೆಗಳೂ ಇದೆ.

ಚೆಂಡಾಟದಲ್ಲಿ ಪ್ರಧಾನವಾಗಿ ಕಂಡುಬರುವಂಥದ್ದು ಮಾನಸಿಕ ಏಕಾಗ್ರತೆ. ಗುರಿ ಎಸೆತ, ಏಟನ್ನು ತಪ್ಪಿಸಿಕೊಳ್ಳುವ ಚಾಕಚಕ್ಯತೆ. ಬೀಸಿ ಹೊಡೆಯುವ ಚಾತುರ್ಯ. ಶೀಘ್ರ ಚಲನೆ ಇತ್ಯಾದಿ. ಚೆಂಡಾಟದಲ್ಲಿ ಬಳಸುವ ಚೆಂಡು ಸಾಮಾನ್ಯವಾಗಿ ಚಿಂದಿ ಬಟ್ಟೆಗಳನ್ನು ಒಂದರೊಳಗೊಂದು ಸುತ್ತಿ ಹೊಲಿದು ನಿರ್ಮಿಸಿದ್ದು.

1.4.12 **ಕುಂಟಾಟ** : ವಿಶೇಷವಾಗಿ ಹುಡುಗಿಯರು ಆಡುವ ಆಟ. ಮನೆಯ ಮುಂದಿನ ಅಂಗಳ ಇಲ್ಲವೆ ಬಯಲಿನಲ್ಲಿ ಈ ಆಟವನ್ನು ಆಡುತ್ತಾರೆ. ಪರಸ್ಪರ ಚಪ್ಪಾಳೆಗಳನ್ನು ಹಾಕುವ ಮೂಲಕ ಕಳ್ಳಿಯನ್ನು ನಿರ್ಣಯಿಸಿ, ನಿಗದಿಪಡಿಸಿದ ಅಂತರದಲ್ಲಿ ಎರಡು ಗೆರೆಗಳನ್ನು ಎಳೆಯುತ್ತಾರೆ. ಇದಕ್ಕೆ ಪಟ್ಟಿ ಅಥವಾ ಬೌಂಡರಿ ಎಂದು ಕರೆಯುವುದುಂಟು. ಕಳ್ಳಿಯಾದವಳು ಗೆರೆಯ ಹೊರಗೆ ನಿಂತುಕೊಂಡು ಜೂಟಾ ಎಂದು ಕೇಳುತ್ತಾಳೆ. ಉಳಿದವರು ಗೆರೆಯ ಒಳಗಡೆ ಇದ್ದು ಜೂಟ್ ಎನ್ನುತ್ತಾರೆ. ಕಳ್ಳಿಯು ಎಡಗಾಲು ಇಲ್ಲವೆ ಬಲಗಾಲನ್ನು ತುಸು ಮೇಲಕ್ಕೆತ್ತಿ ಕುಂಟುತ್ತಾ

ಗೆರೆ ಒಳಗಿನ ಆಟಗಾರರನ್ನು ಹಿಡಿಯಲು ಗಡಿಯ ಒಳಕ್ಕೆ ಬರುತ್ತಾಳೆ. ಆಟಗಾರರು ಕುಂಟಿಯ ಕೈಗೆ ಸಿಗದೆ ಗೆರೆಯ ಒಳಗಡೆಯೇ ಓಡಾಡುತ್ತಾರೆ. ಕಳ್ಳಿಯು ಯಾರನ್ನಾದರೂ ಮುಟ್ಟಿಸಿದರೆ, ಮುಟ್ಟಿಸಿಕೊಂಡವರು ಕಳ್ಳರಾಗಿ ಕುಂಟಲಾರಂಭಿಸುತ್ತಾರೆ. ಒಂದು ವೇಳೆ ಆಟಗಾರರು ಗೆರೆ ದಾಟಿದರೂ ಕಳ್ಳರಾಗುತ್ತಾರೆ. ಕಳ್ಳಿಯು ಕುಂಟುವಾಗ ಕಾಲನ್ನು ನೆಲಕ್ಕೆ ತಗುಲಿಸಬಾರದು. ಕಾಲನ್ನು ಬದಲಿಸಿ ಕುಂಟುವಂತಿಲ್ಲ. ಒಂದೇ ಕಡೆ ಎಷ್ಟು ಹೊತ್ತಾದರೂ ನಿಲ್ಲಕೂಡದು. ಕಳ್ಳಿಯು ಈ ನಿಯಮಗಳನ್ನು ಮೀರಿದರೆ ಆಟ ಕೊನೆಯಾಗುತ್ತದೆ. ಮತ್ತೆ ಹೊಸದಾಗಿ ಕಳ್ಳಿಯಾದವಳು ಆಟ ಪ್ರಾರಂಭ ಮಾಡುತ್ತಾಳೆ.

1.4.13 **ಗುಲ್ಲೋರಿಯೊ** : ಗಂಡುಮಕ್ಕಳ ಹೊರಾಂಗಣ ಆಟ. ಮೂರಕ್ಕಿಂತ ಹೆಚ್ಚು ಮಂದಿ ಆಟಗಾರರಿರುತ್ತಾರೆ. ಪರಸ್ಪರ ಚಪ್ಪಾಳೆಗಳನ್ನು (ಕ್ಲ್ಯಾಪ್ಸ್) ಹಾಕುವುದರ ಮೂಲಕ ಕಳ್ಳನನ್ನು ಗುರುತಿಸುತ್ತಾರೆ. ಗೆದ್ದವರು ಸೋತವರಿಗೆ ದೂರದಲ್ಲಿರುವ ಗಿಡ ಒಂದನ್ನು ತೋರಿಸಿ ಅದರ ಎಲೆ ತರುವಂತೆ ಸೂಚಿಸುತ್ತಾರೆ. ಸೋತವನು ಗಿಡದ ಎಲೆ ಕಿತ್ತುಕೊಂಡು ಬರಲು ಹೋದಾಗ ಉಳಿದವರೆಲ್ಲ ಬಚ್ಚಿಟ್ಟುಕೊಳ್ಳುತ್ತಾರೆ. ಕಳ್ಳನು ಗಿಡದ ಎಲೆಗಳನ್ನು ಕಿತ್ತುಕೊಂಡು ಬಂದು ಬಚ್ಚಿಟ್ಟುಕೊಂಡವರನ್ನು ಹುಡುಕಲಾರಂಭಿಸುತ್ತಾರೆ. ಯಾರು ಅವನ ಕಣ್ಣಿಗೆ ಕಾಣಿಸುತ್ತಾರೋ ಮೊದಲು ಅವರ ಹೆಸರು ಹೇಳಿ ನಂತರ ಗುಲ್ಲೋರಿಯೋ ಎಂದು ಕೂಗುತ್ತಾನೆ. ಆಗ ಉಳಿದವರು ತಾವು ಬಚ್ಚಿಟ್ಟುಕೊಂಡಿದ್ದ ಸ್ಥಳದಿಂದ ಹೊರಬರುತ್ತಾರೆ. ಉದಾಹರಣೆಗೆ: ಕೆಂಪ ಎನ್ನುವ ಹುಡುಗ ಮೊದಲು ಕಳ್ಳನ ಕಣ್ಣಿಗೆಬಿದ್ದರೆ ಕೆಂಪ ಗುಲ್ಲೋರಿಯೋ ಎಂದು ಕಳ್ಳ ಕೂಗುತ್ತಾನೆ. ನಂತರ ಕೆಂಪ ಕಳ್ಳನಾಗಿ ಗಿಡದ ಎಲೆ ತರಲು ಹೋಗುತ್ತಾನೆ. ಆಟ

ಮುಂದುವರಿಯುತ್ತದೆ. ಗುಟೋರಿ, ಗುಡಾರಿ, ಗುಡೋರಿ ಮುಂತಾದ ಹೆಸರುಗಳಿಂದಲೂ ಈ ಆಟವನ್ನು ಗುರುತಿಸುತ್ತಾರೆ.

1.4.14 **ಟೋಪಿಯಾಟ** : ಹೆಣ್ಣು ಮತ್ತು ಗಂಡು ಮಕ್ಕಳು ಪ್ರತ್ಯೇಕವಾಗಿ ಅಥವಾ ಉಭಯರೂ ಕೂಡಿ ಆಡಬಹುದಾದ ಆಟ. ನಾಲ್ಕಕ್ಕಿಂತ ಹೆಚ್ಚು ಮಂದಿ ಇರುತ್ತಾರೆ. ಆಟಗಾರರು ವೃತ್ತಾಕಾರದಲ್ಲಿ ತಲೆತಗ್ಗಿಸಿ ಕುಳಿತುಕೊಳ್ಳುತ್ತಾರೆ. ಆಟಗಾರರಲ್ಲಿ ಒಬ್ಬ ಒಂದು ಟೋಪಿ ಅಥವಾ ಬಟ್ಟೆಯ ತುಂಡನ್ನು ತೆಗೆದುಕೊಂಡು ವೃತ್ತಾಕಾರವಾಗಿ ತಲೆತಗ್ಗಿಸಿ ಕುಳಿತವರನ್ನು ಮೂರ್‍ನಾಲ್ಕು ಬಾರಿ ಸುತ್ತುಹಾಕಿ ಅನುಮಾನ ಬರದಂತೆ ಯಾರಾದರೊಬ್ಬರ ಬೆನ್ನ ಹಿಂದೆ ಇಡುತ್ತಾನೆ. ಅನಂತರ ಮತ್ತೆ ಒಂದೆರಡು ಸುತ್ತು ಬಂದು ತನ್ನ ಜಾಗಕ್ಕೆ ಹೋಗಿ ಕೂರುತ್ತಾನೆ. ಒಂದೆರಡು ಕ್ಷಣಗಳವರೆಗೂ ಎಲ್ಲವೂ ನಿಶ್ಶಬ್ದ. ಟೋಪಿಯು ಯಾರ ಹಿಂದೆ ಇದೆಯೋ ಅವನು ಅದನ್ನು ಗುರುತಿಸಿ ಏಳದಿದ್ದರೆ, ಟೋಪಿ ಹಾಕಿದವನೇ ಎದ್ದು ಅವನ ಬಳಿ ಹೋಗಿ ಟೋಪಿಯಿಂದ ಅವನ ಬೆನ್ನಿನ ಮೇಲೆ ರಪ್ ರಪ್ ಎಂದು ಬಾರಿಸುತ್ತಾನೆ. ಟೋಪಿಯಿಂದ ಹೊಡೆಸಿಕೊಳ್ಳುವ ಆಟಗಾರ ಒಂದು ಸುತ್ತು ಬಂದು ಮತ್ತೆ ತನ್ನ ಸ್ಥಳದಲ್ಲಿ ಕುಳಿತುಕೊಳ್ಳುತ್ತಾನೆ.

ಟೋಪಿಯಾಟವು ಕುತೂಹಲಕಾರಿಯಾದ ಆಟ. ಇದರಲ್ಲಿ ಆಟಗಾರರಿಗೆ ಸೂಕ್ಷ್ಮಮತಿ ಮತ್ತು ಊಹಾ ಶಕ್ತಿಗಳಿರಬೇಕು. ತಲೆ ಬಗ್ಗಿಸಿ ಕುಳಿತಿರುವಾಗ ಟೋಪಿ ಹಾಕುವವನು ತನ್ನ ಹಿಂದೆ ಕ್ಷಣಕಾಲ ನಿಂತರೂ ಸುಳಿವು ಹಿಡಿದು ಟೋಪಿಯು ತನ್ನ ಹಿಂದೆ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳುವಂತಿರಬೇಕು. ತನಗೆ ಏಟು ಬೀಳುವ ಮೊದಲೇ ಎದ್ದು ಟೋಪಿ ತೆಗೆದುಕೊಂಡು ತಾನು ಸುತ್ತಬೇಕು. ಅಲ್ಲದೆ, ತನ್ನ ಹಿಂದೆ ಟೋಪಿ ಇಟ್ಟವನ ಹಿಂದೆಯೇ ಟೋಪಿ ಇಟ್ಟು ಛಲ ತೀರಿಸಿಕೊಳ್ಳುವಂತಿರಬೇಕು.

ಆಟ ಆಡುವ ಸಂದರ್ಭದಲ್ಲಿ :
ಟೋಪಿ ಬೇಕೆ ಟೋಪಿ
ಎಂಥಾ ಟೋಪಿ?
ಚಿನ್ನದ ಟೋಪಿ.
ಎಷ್ಟು ರೂಪಾಯಿ?
ಸಾವಿರ ರೂಪಾಯಿ.
ಕೊಡು ಕೊಡು
ಬೇಕೇ ಬೇಕೆ?

ಎಂದು ಹಾಡು ಹೇಳುವುದುಂಟು.

1.4.15 **ಕೆರೆ–ದಂಡೆ ಆಟ** : ಹೆಣ್ಣು ಮತ್ತು ಗಂಡು ಮಕ್ಕಳ ಹೊರಾಂಗಣ ಆಟ. ದೇಹ ಮತ್ತು ಮನಸ್ಸುಗಳಿಗೆ ಏಕಕಾಲಕ್ಕೆ ವ್ಯಾಯಾಮ ನೀಡುವಂತಹ ವಿಶಿಷ್ಟವಾದ ಆಟ. ಮಕ್ಕಳು ಗುಂಪುಗಳಲ್ಲಿ ಇಲ್ಲವೆ ಒಬ್ಬೊಬ್ಬರೇ ನಿಂತುಕೊಂಡು ಈ ಆಟ ಆಡುತ್ತಾರೆ. ನಿಗದಿಪಡಿಸಿದ ಜಾಗದಲ್ಲಿ ಒಂದು ಉದ್ದನೆಯ ಅಡ್ಡಗೆರೆ ಎಳೆದು, ಆಚೆ ಬದಿಯನ್ನು ಕೆರೆ ಎಂದು, ಈಚೆ ಬದಿಯನ್ನು ದಂಡೆ ಎಂದು ಗುರುತು ಮಾಡುತ್ತಾರೆ. ಮೊದಲು ದಂಡೆಯ ಬದಿಯಲ್ಲಿ ನಿಲ್ಲುತ್ತಾರೆ. ಮತ್ತೊಂದು ಗುಂಪಿನವರು ಕೆರೆ–ದಂಡೆ ಎಂದು ಸೂಚಿಸುತ್ತಾ ಹೋಗುತ್ತಾರೆ. ಸೂಚನಾ ತಂಡದವರು ಕೆರೆ ಎಂದಾಗ ದಂಡೆಯ ಬದಿಯಲ್ಲಿ ನಿಂತವರು ಕೆರೆಯ ಬದಿಗೂ ದಂಡೆ ಎಂದಾಗ ದಂಡೆಯ ಬದಿಗೂ ಜಿಗಿಯಬೇಕು. ಚಲನೆಯು ನಿಧಾನವಾಗಿ ಆರಂಭವಾಗಿ ಕ್ರಮೇಣ ವೇಗವನ್ನು ಏರಿಸಿಕೊಳ್ಳುತ್ತದೆ. ನಿರ್ದೇಶಿಸುವವರು ಮೊದಲು ನಿಧಾನವಾಗಿ ಕೆರೆ–ದಂಡೆ, ಕೆರೆ–ದಂಡೆ ಎಂದು ಹೇಳುತ್ತಾ ಕ್ರಮೇಣ ಆತುರಾತುರವಾಗಿ ನಿರ್ದೇಶಿಸುತ್ತಾರೆ. ಅಂತಹ ಸಂದರ್ಭದಲ್ಲಿ ಕೆರೆ–ದಂಡೆ ಎನ್ನುವ ಬದಲಾಗಿ, ಎದುರಾಳಿಗಳನ್ನು

ದಿಕ್ಕು ತಪ್ಪಿಸುವ ಸಲುವಾಗಿ ಕೆರೆ–ಕೆರೆ ಅಥವಾ ದಂಡೆ–ದಂಡೆ ಎಂದೂ ಹೇಳುವುದುಂಟು. ಮೊದಲಿಗೆ ಕೆರೆ ಎಂದು ಹೇಳಿದಾಗ ಕೆರೆಯ ಬದಿಗೆ ಜಿಗಿದಿದ್ದವಳು ಎದುರು ತಂಡದವರು ಮತ್ತೆ ತಟ್ಟನೆ ಕೆರೆ ಎಂದಾಗ ದಂಡೆಯ ಬದಿಗೆ ಜಿಗಿದರೆ ಅಥವಾ ಕಾಲು ತೆಗೆದರೂ ಆಟದಿಂದ ಹೊರ ಬರಬೇಕು. ಎದುರಾಳಿಗಳು ಏನು ಹೇಳುತ್ತಾರೆ ಎಂಬುದನ್ನು ಏಕಾಗ್ರತೆಯಿಂದ ಗ್ರಹಿಸುವ ಎಚ್ಚರವಿರಬೇಕು. ಕಿವಿಯಷ್ಟೇ ಚುರುಕಾಗಿ, ದೇಹದ ಇತರ ಅಂಗಾಂಗಗಳೂ ಚುರುಕಾಗಿರಬೇಕು. ಆಟದಲ್ಲಿ ತಲ್ಲೀನನಾಗುವುದಕ್ಕಿಂತ ಹೆಚ್ಚಾಗಿ ಮಾನಸಿಕ ಏಕಾಗ್ರತೆ ಕಾಪಾಡಿಕೊಳ್ಳಬೇಕು.

1.4.16 **ಬಗಾಟ ಬಗರಿ** : ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಕಂಡು ಬರುವ ಹೆಣ್ಣುಮಕ್ಕಳ ಆಟ. ಬಗಾಟ ಬಗರಿಗೆ ಪುಗಡಿ ಆಟ, ಸಕ್ಕಸರಗಿ, ಉದ್ದುದ್ದೌ ಮುಂತಾದ ಹೆಸರುಗಳಿವೆ. ಇಬ್ಬರು ಹುಡುಗಿಯರು ಎದುರು ಬದುರು ನಿಂತು ದೇಹವನ್ನು ತುಸು ಹಿಂದಕ್ಕೆ ಬಾಗಿಸಿ ಒಬ್ಬರ ಕೈ ಬೆರಳುಗಳನ್ನು ಮತ್ತೊಬ್ಬರ ಕೈಬೆರಳುಗಳೊಂದಿಗೆ ಕತ್ತರಿಯಾಕಾರದಲ್ಲಿ ಹೆಣೆದುಕೊಂಡು ದುಂಡಗೆ ತಿರುಗುತ್ತಾ ಗಿರಗಿಟ್ಟಳೆ ಆಡುತ್ತಾರೆ. ಆಟದೊಂದಿಗೆ ಹಾಡು ಬೆರೆತುಕೊಳ್ಳುತ್ತದೆ.

ಬಗಾಟ ಬಗರಿ ಆಡೋಣ ಬಾ
ಬಣ್ಣದ ಚವರಿ ಬೀಸೋಣ ಬಾ
ದೇವರ್‍ಗಿ ಹೋಗ್ತೀನಿ ದಂಡಿ ತಾ
ತಂಬ್ಗೊಂಡ ಹೋಗ್ತೀನಿ ಗಿಂಡಿ ತಾ
ಕಟ್ಟಿ ಮ್ಯಾಲ ಕರ । ಉತ್ತತ್ತಿ ಸರ
ಗಿರಿಗಿರಿ ಗಿಂಡಿ । ಈಬತ್ತಿ ಉಂಡಿ.

ಹಾಡು ಮುಂದುವರಿಯುತ್ತದೆ. ಬೆಳೆದ ಹೆಣ್ಣುಮಕ್ಕಳೂ ಸಹ ಈ ಆಟ ಆಡುವುದುಂಟು.

ಉತ್ತರಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಬಗಾಟ ಬಗರಿ ಆಟವನ್ನೇ ಹೋಲುವ ದಕ್ಷಿಣ ಕರ್ನಾಟಕದಲ್ಲಿ ರೂಢಿಯಲ್ಲಿರುವ ಆಟಕ್ಕೆ ಕುಕ್ಕುರು ಬಸವಿ ಎಂದು ಕರೆಯುತ್ತಾರೆ. ಇಲ್ಲಿಯೂ ಹೆಣ್ಣು ಮಕ್ಕಳದೇ ಪ್ರಾಧಾನ್ಯತೆ. ಕತ್ತರಿಯಾಕಾರದಲ್ಲಿ ತಮ್ಮ ಕೈಗಳ ಬೆರಳುಗಳನ್ನು ಹೆಣೆದುಕೊಂಡು ದೇಹವನ್ನು ಹಿಂದಕ್ಕೆ ಬಾಗಿಸಿ ವೃತ್ತಾಕಾರದಲ್ಲಿ ತಿರುಗುವುದನ್ನು ಕಂಡಾಗ ನೋಡುಗರ ಮನಸ್ಸನ್ನು ಸೆಳೆಯುತ್ತದೆ. ಕುಕ್ಕರು ಬಸವಿ ಆಟದೊಂದಿಗೆ ಕೆಳಕಂಡ ಹಾಡು ಹಾಡುತ್ತಾರೆ.

ರತ್ತೋ ರತ್ತೋ ರಾಯನ ಮಗಳೆ
ಬಿತ್ತೋ ಬಿತ್ತೋ ಭೀಮನ ಮಗಳೆ
ಹದಿನಾರೆಮ್ಮೆ ಕರೆಯಲಾರೆ ಕಾಯ್ಸಲಾರೆ
ಬೈಟು ಕಂಬ ಬಾಳೇ ಕಂಬ
ಕುಕ್ಕರು ಬಸವಿ ಕೂರೇ ಬಸವಿ.

1.4.17 **ಕಪ್ಪಿ ಆಟ** : ಕಪ್ಪಿಯಾಟವು ಸಹ ಉತ್ತರಕರ್ಣಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಹೆಣ್ಣುಮಕ್ಕಳ ಆಟ. ಆಟದೊಂದಿಗೆ ಹಾಡು ಬೆರೆತುಕೊಂಡಿರುವ ಕಪ್ಪಿಯಾಟಕ್ಕೆ ಕುಪ್ಪಿ ಆಟ, ಅಗಸ್ ಬುಗಸ್ ಆಟ ಎಂದೂ ಕರೆಯುತ್ತಾರೆ. ನಿಗದಿಪಡಿಸಿದ ಸ್ಥಳದಲ್ಲಿ, ನಿರ್ದಿಷ್ಟ ಅಂತರದಲ್ಲಿ ಇಬ್ಬಿಬ್ಬರು ಹುಡುಗಿಯರು ಪರಸ್ಪರ ಅಭಿಮುಖವಾಗಿ ನೆಲದ ಮೇಲೆ ಕೈಊರಿ ಕಪ್ಪೆಯಂತೆ ಕುಪ್ಪಳಿಸುತ್ತಾ ಒಬ್ಬರ ಸ್ಥಳ ಒಬ್ಬರು ಮುಟ್ಟಿ ಮತ್ತೆ ಹಿಂದಿರುಗಿ ತನ್ನ ಸ್ಥಳಕ್ಕೆ ಬಂದು, ಅಲ್ಲಿ ನೆಲದ ಮೇಲೆ ಉಗುಳಿ ಬೊಗಸೆ ಮಣ್ಣು ಹಾಕಿದ ನಂತರ ಒಬ್ಬಳು "ಥೂ ನನ್ನ ಎಮ್ಮಿ ಈತೆವ್ವಾ" ಎನ್ನುತ್ತಾಳೆ. ಮತ್ತೊಬ್ಬಳು 'ಏನೀತವ್ವಾ' ಎಂದು ಕೇಳುತ್ತಾಳೆ. ಮುಂದುವರಿದು ಮತ್ತೊಬ್ಬಳು ಗಿಣ್ಣ ಕೇಳುವುದು, ಇನ್ನೊಬ್ಬಳು ಕೊಡುವುದು. ಮತ್ತೆ ಹಿಂದಿರುಗಿ ಬರುವುದು. ಗಿಣ್ಣ ಕೊಡುವುದಿಲ್ಲವೆಂದಾಗ ಒಬ್ಬರಿಗೊಬ್ಬರು

ಬೈದುಕೊಳ್ಳುವುದು, ಅಣಕಿಸಿ ಓಡಿ ಹೋಗುವುದು. ಓಡಿ ಹೋದವಳನ್ನು ಹಿಡಿಯಲು ಬೆನ್ನು ಹತ್ತುವುದು – ಹೀಗೆ ಆಟ ಮುಂದುವರಿಯುತ್ತದೆ. ಕಪ್ಪಿ ಆಟದೊಂದಿಗೆ ಹೇಳುವ ಹಾಡು ಕೆಳಗಿನಂತಿದೆ :

ಅಗಸ್ ಬುಗಸ್ ಅಕ್ಕಿ ತೊಳಸ್
ಥೂ ಥೂ ನಮ್ಮ ಎಮ್ಮಿ ಈತು
ಏನೀದಾದ ?
ಹೆಣಗರ ಈದಾದ
ಹಂಗಾರ ನನಗೀಟ ಗಿಣ್ಣಾ ಆರೆ ಕೊಡು
ನಾ ಗಿಣ್ಣಾ ಕುಡಾಂಗಿಲ್ಲಾ
ಹತ್ ನನ ಸಂವತಿ ಗಿಣ್ಣಾ ಕೊಡಾಂಗಿಲ್ಲಾ
ಕುಲಾಯಿ ಕಟಗೊ ಕುಲಕಣ್ಣಿಗಿ ಇಟಗೊ
ಊರಮುಂದ ಗದ್ದಿ – ನಿಮ್ಮವ್ವ ಲದ್ದಿ
ಬಾಯಾಗ ಹಲ್ಲ – ನಿಮ್ಮವ್ವ ಕಲ್ಲ
ಅಂಗಡ್ಯಾಗ ಪತ್ತಿ – ನಿಮ್ಮವ್ವ ಕತ್ತಿ
ಮಾಡ್ದಾಗ ಮಿಳ್ಳಿ – ನಿಮ್ಮವ್ವ ಕಳ್ಳಿ
ತುಪ್ಪದಾಗ ಕಡ್ಡಿ – ನಿಮ್ಮವ್ವ ಕುಡ್ಡಿ.

1.4.18 **ಕಾನಕಾನುತ್ತತ್ತ್ಯೋ** : ಉತ್ತರಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಈ ಹೊರಾಂಗಣ ಆಟವು ಹುಡುಗರಿಗೆ ಸಂಬಂಧಿಸಿದ್ದು. ನಾಲ್ಕೈದು ಮಂದಿ ಹುಡುಗರು ಸೇರಿ, ಕ್ಲಾಪ್ಸ್ ಹಾಕಿ ಸೋತವನು ಕುದುರೆ ಆಕಾರದಲ್ಲಿ ಬಗ್ಗಿ ನಿಲ್ಲುವನು. ಒಬ್ಬನು ಅವನ ಮೇಲೆ ಹತ್ತಿ ಕೂರುವನು. ಉಳಿದವರು ದೂರ ಹೋಗಿ ನಿಲ್ಲುವರು. ಕುದುರೆ ಮೇಲೆ ಕುಳಿತವ ಕಣಕಣತತಿ ಎಂದಾಗ ದೂರ ನಿಂತವರು

ಏಕೇಕಬಾರ ಎನ್ನುತ್ತಾರೆ. ದೋದೋ ಬಾರ ಎಂದೂ ತೀನತೀನ ಬಾರ ಎಂದೂ ಮೂರು ಸಲ ಹೇಳಿದ ನಂತರ ಮೇಲೆ ಕುಳಿತವನು ಕೆಳಗಿಳಿದು ಉಳಿದ ಆಟಗಾರರನ್ನು ಮುಟ್ಟಲು ಓಡುವನು. ಕೆಲವು ಕಡೆ ಬಗ್ಗಿದವನ ಮೇಲೆ ಕುಳಿತವ ಕಾನಕಾನ ಉತ್ತತ್ತಿ ಎಂದಾಗ ಇಲ್ಲಿಗೆ ಬಂತೊ ಸಂಗಯ್ಯಾ ಎಂದು ಓಡುವರು. ಮೇಲೆ ಕುಳಿತವನು ಹಿಡಿಯಲು ಬಂದಾಗ, ಉಳಿದ ಆಟಗಾರರು ಅವನ ಕಣ್ಣು ತಪ್ಪಿಸಿ ಬಗ್ಗಿದವನ ಬೆನ್ನ ಮೇಲೆ ಕುಳಿತುಕೊಳ್ಳಲು ಯತ್ನಿಸುತ್ತಾರೆ. ಮುಟ್ಟುವವನು ಯಾರಿಗಾದರೂ ಒಬ್ಬರಿಗೆ ಮುಟ್ಟಿದರೂ ಆಟ ಮೊದಲಿನಿಂದ ಪ್ರಾರಂಭವಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಬಹುತೇಕ ಆಟಗಳು ಚುಕ್ಕೋಳ ಪದಗಳೊಂದಿಗೆ ಬಂದಿವೆ. ಡಾ.ಮಲ್ಲಿಕಾರ್ಜುನ ಲಠ್ಠೆಯವರು ಈ ಆಟಗಳು ಮತ್ತು ಆಟಸಂಬಂಧಿ ಪದಗಳನ್ನು ತಮ್ಮ 'ಚುಕ್ಕೋಳ ಪದಗಳು' ಕೃತಿಯಲ್ಲಿ ದಾಖಲಿಸಿರುತ್ತಾರೆ.

1.4.19 **ಆನೆ ಕುರಿ ಆಟ** : ಕರ್ನಾಟಕದಾದ್ಯಂತ ಜನಪ್ರಿಯವಾಗಿರುವ ಆಟ. ಹೆಣ್ಣು ಗಂಡೆಂಬ ಭೇದವಿಲ್ಲದೆ ಮನೆಯ ಒಳಗೆ ಮತ್ತು ಹೊರಗೆ ಎಲ್ಲಿ ಯಾರು ಬೇಕಾದರೂ ಆಡಬಹುದು. ಒಂದು ಬಾರಿಗೆ ಇಬ್ಬರು ಆಡುವ ಆಟ. ಸರಳ, ಸಂಕೀರ್ಣ, ಚಾಣಾಕ್ಷತೆಯಿಂದ ಕೂಡಿದ ಈ ಆಟದಲ್ಲಿ ಒಬ್ಬರಿಗೆ ಮೂರು ಆನೆ ಮತ್ತೊಬ್ಬರಿಗೆ ಇಪ್ಪತ್ತು ಕುರಿ. ಘಟ್ಟಾಬಾರದ ರೀತಿಯಲ್ಲಿ ಮನೆಗಳನ್ನು ಬರೆದುಕೊಂಡು, ಆನೆ ಮತ್ತು ಕುರಿಗಳ ಸಂಕೇತವಾಗಿ ಸಣ್ಣ ಕಲ್ಲಿನ ಹರಳುಗಳನ್ನು ಇರಿಸಿಕೊಂಡು, ಮನೆಯಿಂದ ಮನೆಗೆ ದಾಟುವಾಗ ಮತ್ತು ಹಾಕುವಾಗ ಸೋಲು-ಗೆಲುವುಗಳು ಸಂಭವಿಸುತ್ತವೆ. ಆನೆ ಗಾತ್ರದಲ್ಲಿ ದೊಡ್ಡದು. ಕುರಿ ತೀರಾ ಸಣ್ಣದು. ಆನೆ ಮಾಂಸಾಹಾರಿಯಲ್ಲ; ಆದರೆ ಕುರಿಗಳನ್ನು ತುಳಿದು ಹಾಕಬಲ್ಲದು. ಆನೆಯಿಂದ ಕುರಿಗಳನ್ನು ರಕ್ಷಿಸಲು ಬೇಕಾದ ಯುಕ್ತಿ

ಚಾತುರ್ಯವನ್ನು ಆನೆ ಕುರಿ ಆಟ ಕಲಿಸಿಕೊಡುತ್ತದೆ. ಹುಲಿಕುರಿ ಆಟವೂ ಸಹ ಇದೇ ತೆರನಾದ ಆಶಯವನ್ನುಳ್ಳ ಮತ್ತೊಂದು ಜನಪದ ಆಟ.

1.4.20 **ಅಪ್ಪಂದ ಆಲಿಮೊಗ್ಗು** : ಮಲೆನಾಡಿನಲ್ಲಿ ಕಂಡುಬರುವ ಮಕ್ಕಳ ಈ ಆಟದಲ್ಲಿ ಎರಡು ಭಾಗಗಳಿವೆ. ಪೂರ್ವಾರ್ಧದಲ್ಲಿ ಚಿಕ್ಕಮಕ್ಕಳು ಗುಂಪುಕೂಡಿ ತಮ್ಮ ಎರಡೂ ಕೈಗಳನ್ನು ಮುಷ್ಟಿಕಟ್ಟಿ ನೆಲದ ಮೇಲೆ ಒಂದರ ಮೇಲೊಂದು ಮೂಟೆ ಜೋಡಿಸುವಂತೆ ಜೋಡಿಸುತ್ತಾರೆ. ಒಬ್ಬ ಮಕ್ಕಳನ್ನು ಪ್ರಶ್ನಿಸುತ್ತಾನೆ. ಎಂಥ ಮೂಟೆ, ಕಡ್ಲೆ ಮೂಟೆ, ಅಕ್ಕಿಮೂಟೆ ಎಂದು ಒಬ್ಬೊಬ್ಬರೂ ಉತ್ತರಿಸುತ್ತಾರೆ. ಬೆಣ್ಣೆಹಚ್ಚಲೊ ತುಪ್ಪ ಹಚ್ಚಲೊ ಎಂದರೆ ತುಪ್ಪ ಎನ್ನುವ ಉತ್ತರ ಬರುತ್ತದೆ. ಬಿಸಿನೀರು ಹುಯ್ಯಲೊ ತಣ್ಣೀರು ಹುಯ್ಯಲೊ? ಬಿಸಿನೀರು ಎನ್ನುವ ಉತ್ತರ ಬರುತ್ತದೆ. ಹಳೆ ಕಂಬ್ಳಿ ಹೊಚ್ಚಲೊ ಹೊಸಕಂಬ್ಳಿ ಹೊಚ್ಚಲೊ ? ಹೊಸಕಂಬ್ಳಿ. ಚೋಟಕೈಲಿ ಹೊಡಿಲೊ ಮೋಟಕೈಲಿ ಹೊಡಿಲೋ? ಚೋಟಕೈಲಿ. ಹೀಗೆ ಹೊಡೆಯುವಂತೆ ನಟಿಸಿದಾಗ ಮುಷ್ಟಿಕಟ್ಟಿ ಮೂಟೆಯಂತೆ ಪೇರಿಸಿದ್ದ ಕೈಗಳೆಲ್ಲವೂ ಹಿಂದಕ್ಕೆ ಹೋಗುತ್ತವೆ.

ಈ ಆಟವನ್ನು ಮತ್ತೊಂದು ರೀತಿಯಲ್ಲಿಯೂ ಆಡುವುದುಂಟು. ಎಲ್ಲಾ ಮಕ್ಕಳು ತಮ್ಮ ಅಂಗೈಗಳನ್ನು ನೆಲಕ್ಕೆ ಊರಿ ಕುಳಿತುಕೊಳ್ಳುತ್ತವೆ. ಆಟಗಾರರಲ್ಲಿ ಒಬ್ಬ ತನ್ನ ಕೈಯನ್ನು ನೆಲಕ್ಕೂರಿದ ಇತರ ಮಕ್ಕಳ ಬೆರಳುಗಳ ಮೇಲಿಡುತ್ತಾ ಅಪ್ಪಪ್ಪಂದ, ಆಲಿಮೊಗ್ಗು, ಊರೊಳಗಲಮ್ಮ ಕಲ್ಕಲ್ಲಮ್ಮ, ಕಾಲಿಗೆ ಗೆಜ್ಜೆ, ಮಾವಿನಮೊಗ್ಗು, ಮುನಿಸ್ಕಂತು ಎಂದು ಹೇಳಿ ನಿಲ್ಲಿಸಿದ ಕೈ ಮಗುಚಿಕೊಳ್ಳುತ್ತದೆ. ಹೀಗೆ ಎಲ್ಲಾ ಕೈಗಳು ಮೇಲಕ್ಕೆ ಮಗುಚಿಕೊಂಡಾಗ ಕೈಗಳನ್ನು ತಮ್ಮ ಬೆನ್ನ ಹಿಂದೆ ಅವಿತಿರಿಸಿಕೊಳ್ಳುತ್ತಾರೆ.

ಉತ್ತರಾರ್ಧದ ಆಟ ಪ್ರಾರಂಭವಾಗುತ್ತದೆ. ಆಟದೊಂದಿಗೆ ಹಾಡು ಸೇರಿಕೊಳ್ಳುತ್ತದೆ. ಒಬ್ಬ ಪ್ರಶ್ನಿಸಿದರೆ ಮತ್ತೊಬ್ಬ ಉತ್ತರಿಸುತ್ತಾನೆ.

ಕೈಕೈ ಎಲ್ಲೋದೊ ? ಸಂತೆಗೋದೊ
ಸಂತೇಲೇನ್ತಂದೆ ! ಬಾಳೆಹಣ್ಣು ತಂದೆ
ಬಾಳೆಹಣ್ಣು ಏನ್ಮಾಡ್ದೆ ? ತಿಂದ್‌ಬುಟ್ಟು ಕದೀನ ಮೂಲೆಗ್ಹಾಕ್ದೆ
ಕದ ಏನ್ ಕೊಡ್ತು ! ಚಕ್ಕೆ ಕೊಡ್ತು
ಚಕ್ಕೆ ಏನ್ ಮಾಡ್ದೆ ? ಒಡ್ದು ಒಲೆಗಾಕ್ದೆ
ಒಲೆ ಏನ್ ಕೊಡ್ತು ? ಗರಿಕೆ ಕೊಡ್ತು
ಗರಿಕೆ ಏನ್ ಮಾಡ್ದೆ ? ಹಸುಗ್ಹಾಕ್ದೆ
ಹಸು ಏನ್ ಕೊಡ್ತು ? ಹಾಲು ಕೊಡ್ತು
ಹಾಲು ಏನ್ ಮಾಡ್ದೆ ? ಹೊಟ್ಟೆ ತುಂಬ ಕುಡ್ದೆ.

ಹೀಗೆ ಹಾಡು ಹೇಳುತ್ತಾ ಆಟ ಮುಗಿಸುತ್ತಾರೆ.

1.4.21 **ಚನ್ನೆಮಣೆಯಾಟ** : ಹೆಣ್ಣುಮಕ್ಕಳಿಗೆ ಬಹು ಪ್ರಿಯವಾದ ಚನ್ನೆಮಣೆ ಆಟವಂತೂ ಕರ್ನಾಟಕದಲ್ಲಷ್ಟೇ ಅಲ್ಲ, ಆಫ್ರಿಕಾದಿಂದ ಪಿಲಿಫೈನ್ಸ್‌ವರೆವಿಗೂ ಜನಪ್ರಿಯವಾಗಿರುವ ಜನಪದ ಆಟ. ಅಳಗುಳಿಮಣೆ, ಪತ್ತಾಮಣೆ, ಹರಳುಮಣೆ, ಸೀತೆಮಣೆ ಮೊದಲಾದ ಹೆಸರುಗಳಿಂದ ಗುರುತಿಸಲ್ಪಡುವ ಚನ್ನೆಮಣೆಯನ್ನು ಮರದಿಂದ ಕೆತ್ತಿರುತ್ತಾರೆ. ಒಂದು ಸಾಲಿನಲ್ಲಿ ಏಳೇಳು ಮಣೆಗಳಂತೆ ಎರಡು ಸಾಲುಗಳುಳ್ಳ ಮಣೆಯನ್ನು ಆಟ ಮುಗಿದ ನಂತರ ಪೆಟ್ಟಿಗೆಯ ರೀತಿಯಲ್ಲಿ ಮಡಚಿ ಇಡಬಹುದು. ರಾವಣನು ಕದ್ದೊಯ್ದ ಸೀತೆಯು ರಾಮನ ಆಗಮನವನ್ನು ನಿರೀಕ್ಷಿಸುತ್ತಾ ಕಾಲ ಕಳೆಯುವ ಸಲುವಾಗಿ ಅಶೋಕವನದಲ್ಲಿ ಒಬ್ಬಳೇ ಈ ಆಟವನ್ನು ಆಡುತ್ತಿದ್ದುದರಿಂದ ಈ ಆಟಕ್ಕೆ ಸೀತೆಯಾಟ ಎಂದೂ ಹೆಸರಿದೆ. ತುಳುನಾಡಿನ ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಚನ್ನೆಮಣೆಯು ಹಾಸುಹೊಕ್ಕಾಗಿದೆ.

ಪ್ರತಿ ಸಾಲಿನಲ್ಲಿ ಏಳು ಗುಣಿಗಳಿದ್ದು ಎರಡೂ ಸಾಲುಗಳಲ್ಲಿ ಹದಿನಾಲ್ಕು ಗುಣಿಗಳಿರುವ ಮಣೆಯ ಮಧ್ಯಭಾಗದಲ್ಲಿ ಕಲಾತ್ಮಕವಾದ ಸುಂದರ ಕುಸುರಿ ಕೆತ್ತನೆಗಳಿರುವ ಚನ್ನೆಮಣೆಗಳೂ ಕಾಣಸಿಗುತ್ತವೆ. ಬಯಲುಸೀಮೆಯಲ್ಲಿ ಈ ಆಟಕ್ಕೆ ಹುಣಸೆಬೀಜ, ಪಾರಿವಾಳದ ಬೀಜಗಳನ್ನು, ಮಲೆನಾಡಿನಲ್ಲಿ ಹಾಲಿವಾಣದ ಬೀಜಗಳನ್ನು, ತುಳುನಾಡಿನಲ್ಲಿ ಮಂಜೊಟ್ಟಿ, ಗುಲಗಂಜಿ ಅಥವಾ ಹೊಂಗಾರೆ ಮರದ ಬೀಜಗಳನ್ನು ಬಳಸುತ್ತಾರೆ. ಚನ್ನೆಮಣೆ ಆಟದಲ್ಲಿ ವೈವಿಧ್ಯಮಯವಾದ ಪ್ರಕಾರಗಳಿವೆ. ತುಳುನಾಡಿನಲ್ಲಿ ಸುಮಾರು 27 ಬಗೆಯ ಆಟಗಳನ್ನು ಆಡುತ್ತಾರೆ. ಬಯಲು ಸೀಮೆಯಲ್ಲಿ ಸಾದಾ ಆಟ, ಕಚ್ಚಾಟ, ರಾಜಾಟ, ಕಾಳಿ ಆಟ, ಸೀತೆ ಆಟ ಮೊದಲಾದ ಪ್ರಕಾರಗಳು ರೂಢಿಯಲ್ಲಿವೆ.

ಚನ್ನೆಮಣೆ ಆಟದಲ್ಲಿ ಮುಖ್ಯವಾಗಿ ಆಟಗಾರನ ಜಾಣ್ಮೆ, ನೆನಪಿನ ಶಕ್ತಿ, ಮುಂದಾಲೋಚನೆಗಳು ಮಹತ್ವದ ಪಾತ್ರ ವಹಿಸುತ್ತವೆ. ಯಾವ ಮನೆಯನ್ನು ಮೊದಲು ಹಿಡಿದರೆ ಹೆಚ್ಚಿನ ಕಾಯಿಗಳನ್ನು ಗೆಲ್ಲಬಹುದು ಎನ್ನುವುದನ್ನು ಕ್ಷಣದಲ್ಲಿ ತರ್ಕಿಸಿ ಕಾಯಿನಡೆಸಬೇಕಾಗಿರುತ್ತದೆ. ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಮಹತ್ವ ಪಡೆದಿರುವ ಈ ಆಟವು ಹಲವಾರು ವಿಧಿನಿಷೇಧಗಳನ್ನು ತನ್ನಲ್ಲಿ ಒಳಗೊಂಡಿದೆ. ಸೋದರರು, ಸೋದರಿಯರು ಮತ್ತು ದಂಪತಿಗಳು ಈ ಆಟವನ್ನು ಆಡಬಾರದು, ಚನ್ನೆಮಣೆಯನ್ನು ಬೇರೆಯವರಿಗೆ ಎರವಲು ಕೊಡಬಾರದು, ಜೂಜಿಗೆಂದು ಆಡಬಾರದು, ಹೆಣ್ಣುಮಕ್ಕಳು ತಮ್ಮ ಗಂಡನ ಅಕ್ಕ ಅಥವಾ ಅಣ್ಣನ ಜೊತೆ ಆಡಬಾರದು ಮುಂತಾದ ನಿಷೇಧಗಳಿವೆ. ಕೆಲವು ಕಡೆಗಳಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣುಮಕ್ಕಳಿಗೆ ಚನ್ನೆಮಣೆಯನ್ನು ಬಳುವಳಿಯಾಗಿ ಕೊಡುವುದುಂಟು.

1.4.22 **ಕಾಗೆ–ಗಿಳಿ ಆಟ** : ಕಾಗೆ–ಗಿಳಿ ಆಟವು ತುಳುನಾಡಿನಾದ್ಯಂತ ಮಕ್ಕಳ ಆಟಗಳಲ್ಲಿ ಅತ್ಯಂತ ಜನಪ್ರಿಯವಾದ ಆಟವಾಗಿರುತ್ತದೆ. ಈ ಆಟಕ್ಕೆ ಎಂಜಲು ಕುಪ್ಪಿ, ಕೊರ್ರ–ಭಟ್ರ, ಉಬ್ಬಿದ ಕಡ್ಯ (ಉಗುಳುವ ಪಾತ್ರೆ) ಮುಂತಾದ ಹೆಸರುಗಳೂ ಉಂಟು.

ನಿರ್ದಿಷ್ಟ ಸ್ಥಳವೊಂದರಲ್ಲಿ ಸೇರಿದ ಮಕ್ಕಳು ಗುಂಪುಗೂಡಿ ಯಾರು ಗಿಳಿ, ಯಾರು ಕಾಗೆ ಎಂಬುದನ್ನು ಮೊದಲು ನಿಷ್ಕರ್ಷಿಸುತ್ತಾರೆ. ಎರಡು ಬೆರಳುಗಳನ್ನು ವೃತ್ತಾಕಾರವಾಗಿ ಮಡಿಚಿ ಅದರ ಮಧ್ಯೆ ಉಗುಳುತ್ತಾರೆ. ಉಗುಳು ಬೆರಳಿಗೆ ಬಿದ್ದವ ಕಾಗೆ, ಬೆರಳಿಗೆ ಬೀಳದವ ಗಿಳಿಯಾಗುತ್ತಾನೆ. ಈ ಆಟದಲ್ಲಿ ಇಷ್ಟೇ ಮಕ್ಕಳು ಭಾಗವಹಿಸಬೇಕೆಂಬ ನಿಯಮವೇನಿಲ್ಲ. ಎಷ್ಟು ಮಕ್ಕಳಾದರೂ ಪಾಲ್ಗೊಳ್ಳಬಹುದು. ಕಾಗೆ–ಗಿಳಿಗಳ ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಕಾಗೆಗಳದೇ ಒಂದು ಗುಂಪು. ಗಿಳಿಗಳದೇ ಒಂದು ಗುಂಪಾಗಿ ನಿಲ್ಲುತ್ತಾರೆ. ಕಾಗೆಗಳು ಗಿಳಿಗಳನ್ನು ಮುಟ್ಟಬಾರದು. ಗಿಳಿಗಳೂ ಸಹ ಕಾಗೆಗಳಿಂದ ಮುಟ್ಟಿಸಿಕೊಳ್ಳಲು ಇಚ್ಛಿಸುವುದಿಲ್ಲ. ಗಿಳಿಗಳು ಕಾಗೆಗಳನ್ನು ಹೀಯಾಳಿಸುವುದು, ಕಾಗೆಗಳು ಅದಕ್ಕೆ ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸುವುದು ನಡೆಯುತ್ತದೆ.

ಆಟ ಮುಂದುವರಿದಂತೆ ಕಾಗೆಗಳು ಗಿಳಿಯನ್ನು 'ನಿಮ್ಮನ್ನು ನಿಂತರೆ ಮುಟ್ಟಲೆ, ಕುಳಿತರೆ ಮುಟ್ಟಲೆ' ಎಂದು ಕೇಳುತ್ತವೆ. ನಿಂತಾಗ ಮುಟ್ಟುವುದು ಸುಲಭವಾದ್ದರಿಂದ ಕುಳಿತರೆ ಮುಟ್ಟಿ ಎಂದು ಗಿಳಿಗಳು ಕಾಗೆಗಳಿಗೆ ಹೇಳುತ್ತವೆ. ಪ್ರಶ್ನೆ–ಉತ್ತರದ ನಂತರ ಗಿಳಿಗಳನ್ನು ಕಾಗೆಗಳು ಮುಟ್ಟದರೆ, ಮುಟ್ಟಿಸಿಕೊಂಡ ಗಿಳಿಗಳು ಕಾಗೆಗಳಾಗುತ್ತವೆ. ಎಲ್ಲಾ ಗಿಳಿಗಳು ಕಾಗೆಗಳಾಗುವವರೆಗೂ ಆಟ ಮುಂದುವರಿಯುತ್ತದೆ. ಕೆಲವು ಬಾರಿ ಎಲ್ಲಾ ಗಿಳಿಗಳನ್ನು ಮುಟ್ಟಲು ಕಾಗೆಗಳಿಂದಾಗದಿದ್ದಲ್ಲಿ ಅವು ಸೋಲನ್ನು ಒಪ್ಪಿಕೊಂಡು ಆಟ ಕೊನೆಯಾಗುತ್ತದೆ. ಕಾಗೆ–ಗಿಳಿ ಆಟವು ವಿಶಾಲವಾದ

ಮೈದಾನದಲ್ಲಿ ನಿಗದಿಪಡಿಸಿದ ಗಡಿಯೊಳಗೆ ನಡೆಯುತ್ತದೆ. "ಈ ಸರಳ ಆಟದಲ್ಲಿ ತುಳುನಾಡಿನ ಸಮಾಜದ ರಚನೆ ಅಂತರ್ಗತವಾಗಿರುವುದು ಒಂದು ಮಹತ್ವದ ವಿಚಾರವಾಗಿದೆ. ತುಳುನಾಡಿನ ಸಾಮಾಜಿಕ ರಚನೆಯ ಪ್ರಮುಖ ಅಂಗವಾದ ಜಾತಿ ವ್ಯವಸ್ಥೆಯ ರೂಪಕವಾಗಿ ಈ ಆಟವು ಕಾರ್ಯನಿರ್ವಹಿಸುತ್ತದೆ. ಈ ಆಟದ ಮೂಲಕ ತುಳುನಾಡಿನ ಜಾತಿಗಳ ನಡುವಿನ ಸಂಕೀರ್ಣ ಸಂಬಂಧವನ್ನು ವಿವರಿಸಬಹುದಾಗಿದೆ" ಎಂದು ವಿಶ್ಲೇಷಿಸುತ್ತಾರೆ ತುಳುನಾಡಿನ ಜಾನಪದ ವಿದ್ವಾಂಸರಾದ ಡಾ.ಗಣನಾಥ ಎಕ್ಕಾರು ಅವರು.

ಆಟಗಳು ಮನರಂಜನೆಗಷ್ಟೇ ಮೀಸಲಾಗಿರದೆ ಮದುವೆ, ಹರಕೆ, ಬಲಿ, ದೈವಾರಾಧನೆಯಂತಹ ಗಂಭೀರ ಸ್ವರೂಪದ ಸಾಮಾಜಿಕ ಆಚರಣೆಗಳಲ್ಲಿಯೂ ಮಹತ್ವದ ಪಾತ್ರ ವಹಿಸಿವೆ. ತುಳುನಾಡಿನಲ್ಲಿ ರೂಢಿಯಲ್ಲಿರುವ ಕಂಬಳ, ಚೆಂಡಾಟ, ಕೋಳಿ ಅಂಕ, ತೂಟೆದಾರ, ಚನ್ನೆಮಣೆಯಂತಹ ಆಟಗಳು ಧಾರ್ಮಿಕ ಹಿನ್ನೆಲೆಯನ್ನು ಹೊಂದಿದ್ದು ಆಚರಣಾತ್ಮಕ ಸಂಬಂಧಗಳನ್ನು ಹೊಂದಿವೆ. ಅದೇ ರೀತಿ ಬಯಲು ಸೀಮೆಯಲ್ಲಿ ನಡೆಯುವ ಮದುವೆಗಳಲ್ಲಿ ಹೆಣ್ಣು-ಗಂಡಿನ ಶಾಸ್ತ್ರಗಳಲ್ಲಿ ಆಟಗಳೂ ಪ್ರಮುಖ ಪಾತ್ರವಹಿಸಿವೆ. ಗಂಡು-ಹೆಣ್ಣುಗಳಿಂದ ಸರಿಬೆಸ ಆಡಿಸುವುದು, ಉಂಗುರ ಬಚ್ಚಿಡುವ ಆಟ, ಅಂಗಿ ಗುಂಡಿ ಬಿಚ್ಚುವ ಆಟ, ಹೂ ಚಂಡಾಟ, ಉಯ್ಯಾಲೆಯಾಟ, ಬಾಳೆಹಣ್ಣಿನ ಆಟ, ಹಪ್ಪಳದ ಆಟ, ಅಕ್ಕಿ ಆನೆ ಉಪ್ಪಿನ ಆನೆಯಾಟ, ಅಡಗಾಟ, ಹವ್ಯಕರ ಮದುವೆಯಲ್ಲಿ ಅಡಿಗೆಯಾಟ ಎನ್ನುವ ಸಟ್‌ಮೂರ್ತವೆಂಬ ಆಚರಣೆ, ಶಿವಳ್ಳಿ ಮೂಲದ ಬ್ರಾಹ್ಮಣರ ಮದುವೆಗಳಲ್ಲಿ ಮೀನು ಹಿಡಿಯೋ ಆಟ, ಮುಂತಾದ ಸ್ವಾರಸ್ಯಕರ ಆಚರಣಾ ಸಂಬಂಧಿ ಆಟಗಳು ರೂಢಿಯಲ್ಲಿವೆ.

ಹೀಗೆ ಕರ್ನಾಟಕದಲ್ಲಿ ಪ್ರಚಲಿತವಿರುವ ವ್ಯಾಪಕ, ಸಮೃದ್ಧ ಹಾಗೂ

ವೈವಿಧ್ಯಮಯ ಜನಪದ ಆಟಗಳನ್ನು ಕುರಿತು ಈಗಾಗಲೇ ಹಲವಾರು ಮಂದಿ ವಿದ್ವಾಂಸರು ಅಧ್ಯಯನ ನಡೆಸಿರುತ್ತಾರೆ. ಸುಶೀಲ ಹೊನ್ನೇಗೌಡ, ಶಾಂತಿನಾಯಕ, ಎನ್.ಆರ್. ನಾಯಕ, ವಿ.ಕೆ.ಜವಳಿ, ಮಲ್ಲಿಕಾರ್ಜುನ ಲಠ್ಠೆ, ಅರವಿಂದ ಮಾಲಗತ್ತಿ, ರಾಗೌ, ಗಣನಾಥ ಎಕ್ಕಾರು ಇವರಲ್ಲಿ ಮುಖ್ಯರು. ಆದರೆ ಆಟಗಳನ್ನು ಕುರಿತಾದಂತೆ ಅಂತರ್ ಶಿಸ್ತೀಯ ನೆಲೆಯಲ್ಲಿ ಸಾಮಾಜಿಕವಾಗಿ, ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಮನೋವೈಜ್ಞಾನಿಕ ನೆಲೆಗಳಲ್ಲಿ ಸಮಗ್ರ ಹಾಗೂ ತೌಲನಿಕ ಅಧ್ಯಯನದ ಅಗತ್ಯವಿದೆ. ಆಟಗಳನ್ನು ಅಧ್ಯಯನಕ್ಕೆ ಒಳಗುಮಾಡುವಾಗ ಪ್ರಾದೇಶಿಕ ಮಿತಿಗಷ್ಟೇ ಮೀಸಲಾಗದೆ ಜಾಗತಿಕ ಹಂತದಲ್ಲಿ ಅಧ್ಯಯನಿಸಬೇಕಾಗಿರುತ್ತದೆ. ಆಗಮಾತ್ರವೇ ಪ್ರತಿಯೊಂದು ಆಟದ ಸಾಮಾಜಿಕ–ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಅರಿಯಲು ಸಾಧ್ಯ.

ಆಟಗಳು ಎಲ್ಲಿಯೂ ಯಾವ ನಾಗರೀಕತೆಯಲ್ಲಿಯೂ ಸಮಾನರೀತಿಯ ಬೆಳವಣಿಗೆಯನ್ನು ಸಾಧಿಸಿರುವುದಿಲ್ಲ. ಪ್ರಾದೇಶಿಕ ಹಿನ್ನೆಲೆಯಲ್ಲಿ ಧಾರ್ಮಿಕ ಆಚರಣೆಗಳು, ಸಾಮಾಜಿಕ ರೀತಿ ರಿವಾಜುಗಳು, ರಾಜಕೀಯ ಸ್ಥಿತ್ಯಂತರಗಳನ್ನು ಅವಲಂಬಿಸಿ ಸಮುದಾಯವು ಆಟಗಳನ್ನು ರೂಪಿಸಿಕೊಂಡು ಬಂದಿರುತ್ತದೆ. ಕಾಲ ಕಳೆದಂತೆಲ್ಲಾ ಸಮುದಾಯವು ಹುಟ್ಟುಹಾಕಿದ ಆಟಗಳಲ್ಲಿ ಕೆಲವು ಕೈಬಿಟ್ಟು ಹೋಗಿರುತ್ತವೆ. ಕೆಲವು ರೂಪಾಂತರಕ್ಕೊಳಗಾಗಿರುತ್ತವೆ. ಮತ್ತೆ ಕೆಲವು ಹೊಸದಾಗಿ ಹುಟ್ಟಿಕೊಂಡಿರುತ್ತವೆ.

ಇತ್ತೀಚಿನ ದಿನಗಳಲ್ಲಿ ಮಾನವ ಶಾಸ್ತ್ರಜ್ಞರು, ಸಂಸ್ಕೃತಿ ತಜ್ಞರು, ಜನಪದ ಆಟಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡುತ್ತಿದ್ದಾರೆ.

ಜನಪದ ಆಟಗಳು ಪ್ರಧಾನವಾಗಿ ಮನರಂಜನೆಯ ಮಾಧ್ಯಮಗಳಾಗಿ

ಕಂಡು ಬಂದರೂ ಆಟಗಳಿಗೂ ಸಂಸ್ಕೃತಿಗೂ ಅವಿನಾಭಾವವಾದ ಸಂಬಂಧವಿದೆ. ಪ್ರಕೃತಿ ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಆಟಗಳು ಬೆಳೆದುಬಂದಿವೆ. ಸಂಸ್ಕೃತಿಯ ಎಲ್ಲಾ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಆಟಗಳನ್ನು ಮುಂದಿನ ತಲೆಮಾರಿಗೆ ದಾಖಲುಗೊಳಿಸಬೇಕಾದದ್ದು ಎಲ್ಲ ಪ್ರಜ್ಞಾವಂತರ ಕರ್ತವ್ಯವಾಗಬೇಕಿದೆ. ನಗರಗಳಲ್ಲಿನ ಅತ್ಯಾಧುನಿಕ ಕ್ರೀಡೆಗಳಿಗೆ ತರಬೇತಿ ಪಡೆದಂತಹ ಆಟಗಾರರ ಪಡೆಗಳಿವೆ. ಸುಸಜ್ಜಿತ ಕ್ರೀಡಾಂಗಣವಿದೆ. ಅತ್ಯಾಧುನಿಕ ಕ್ರೀಡಾಸಲಕರಣೆಗಳ ಲಭ್ಯತೆ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಆಟಗಾರರಿಗೆ ಕೈತುಂಬಾ ಹಣ ಸಿಗುತ್ತಿದೆ. ಆದರೆ ಯಾವ ಆರ್ಥಿಕ ಬೇಡಿಕೆಯೂ ಇರದೆ, ವಿಶಾಲ ಆಶಯಗಳು, ಉದಾತ್ತ ಧ್ಯೇಯಗಳನ್ನು ಹೊಂದಿರುವ ಜನಪದ ಆಟಗಳು ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿ ಆದಿಮಕಾಲದಿಂದಲೂ ಉಳಿದುಕೊಂಡು ಬಂದಿವೆ. ಬದಲಾಗುತ್ತಿರುವ ಪರಿಸರ, ಮನೋಧರ್ಮದ ಫಲವಾಗಿ ಜನಪದ ಆಟಗಳು ಕೈತಪ್ಪಿ ಹೋಗುವ ಮೊದಲು ಅವುಗಳನ್ನು ಉಳಿಸಬೇಕಿದೆ. ಮುಂದಿನ ಮಕ್ಕಳಿಗೆ ಕಲಿಸಬೇಕಿದೆ. ಈ ದಿಸೆಯಲ್ಲಿ ಸರ್ಕಾರ, ಕ್ರೀಡಾಇಲಾಖೆಗಳು, ಸಂಘ ಸಂಸ್ಥೆಗಳು ಸಜ್ಜಾಗಬೇಕಿದೆ.

ಜನಪದ ಆಟಗಳನ್ನು ಕುರಿತು ಓದಬೇಕಾದ ಪುಸ್ತಕಗಳು

1. ಸಂ. ಸುಶೀಲ ಹೊನ್ನೇಗೌಡ – ಜನಪದ ಆಟಗಳು, ಶರತ್ ಪ್ರಕಾಶನ, ಮಂಡ್ಯ, 1979.

2. ಸಂ. ಎನ್.ಆರ್. ನಾಯಕ; ಶಾಂತಿನಾಯಕ–ಉತ್ತರಕನ್ನಡ ಜಿಲ್ಲೆಯ ಜನಪದ ಆಟಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–1981.

3. ಸಂ.ಮಲ್ಲಿಕಾರ್ಜುನ ಲಠ್ಠೆ–ಚುಕ್ಕೋಳ ಪದಗಳು, ಸತೀಶ ಪ್ರಕಾಶನ, ಕಲಬುರ್ಗಿ, 1976.

4. ಅರವಿಂದ ಮಾಲಗತ್ತಿ – ಉತ್ತರ ಕರ್ನಾಟಕದ ಜನಪದ ಆಟಗಳು, ಅಪ್ರಕಟಿತ ಮಹಾಪ್ರಬಂಧ– 1985.

5. ಡಾ.ಗಣನಾಥ ಎಕ್ಕಾರು – ತುಳುನಾಡಿನ ಜನಪದ ಆಟಗಳು. ಜ್ಞಾನೋದಯ ಪ್ರಕಾಶನ, ಬೆಂಗಳೂರು 2000.

6. ದೇಜಗೌ – ಜಾನಪದ ವಾಹಿನಿ ಪು.14.

7. ಸಂ.ಡಾ.ಬಿ.ಎ.ವಿವೇಕ ರೈ, ಜನಪದ ಆಟಗಳು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

ಜನಪದ ಆಟಗಳು

ಕ್ರಿಯಾತ್ಮಕ ಜಾನಪದದಲ್ಲಿ ಜನಪದ ಆಟಗಳದು ವಿಶೇಷ ಕ್ಷೇತ್ರ. ಜಗತ್ತಿನ ಎಲ್ಲಾ ಜನಾಂಗಗಳಲ್ಲೂ ಪ್ರಾಚೀನ ಕಾಲದಿಂದ ಜನಪದ ಆಟಗಳು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ರೂಢಿಯಲ್ಲಿವೆ. ಕರ್ನಾಟಕದಲ್ಲೂ ನೂರಾರು ಜನಪದ ಆಟಗಳು ಚಾಲ್ತಿಯಲ್ಲಿವೆ; ಒಳಾಂಗಣ, ಹೊರಾಂಗಣ, ಆಚರಣಾತ್ಮಕ ಆಟಗಳಾಗಿ ಮನುಕುಲದ ವಿಕಾಸದಲ್ಲಿ ಭಾಗಿಗಳಾಗಿವೆ; ವಿಶ್ವ ವ್ಯಾಪಕತೆಯುನ್ನು ಪಡೆದುಕೊಂಡಿವೆ; ಸಾಮಾಜಿಕ, ರಾಜಕೀಯ, ಮನೋರಂಜಕ, ಸಾಂಸ್ಕೃತಿಕ ಹೊಳಹುಗಳನ್ನು ಮೈದುಂಬಿಕೊಂಡಿವೆ. ಇವುಗಳಲ್ಲಿ ಕ್ರೀಡೆ, ಸಾಹಿತ್ಯ, ಭಾಷಿಕ ತಿಳಿವಳಿಕೆ ಅಳವಡಿಕೆಯಾಗಿರುವುದು ವಿಶೇಷ.

ಡಾ. ಚಕ್ಕೆರೆ ಶಿವಶಂಕರ್ ಪ್ರಸ್ತುತ ಗ್ರಂಥದಲ್ಲಿ ಕರ್ನಾಟಕ ಜನಪದ ಆಟಗಳ ವೈವಿಧ್ಯತೆ, ಸಾಂಕೇತಿಕತೆ, ಆಡುವಿಕೆ, ಅರ್ಥವಂತಿಕೆ ಮೊದಲಾದ ಅಂಶಗಳನ್ನು ಸೋದಾಹರಣವಾಗಿ ಸ್ವಾರಸ್ಯವಾಗಿ ವಿವರಿಸಿದ್ದಾರೆ.

-ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com